46

# ವಿಚ್ಛೇದನದ ಕುರಿತು ಪ್ರಶ್ನೆ

# (19:1-12)

ಮತ್ತಾಯ 19 ಮತ್ತು 20ನೇ ಅಧ್ಯಾಯಗಳು ಯೇಸುವಿನ ಸಂಚಾರ ಸೇವೆಯ ಕುರಿತು ಹೇಳುವ ಒಂದು ಘಟಕವಾಗಿದೆ. ಆತನ ಪ್ರಯಾಣವು ಗಲಿಲಾಯದಲ್ಲಿ ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನಲ್ಲಿರುವ ಪೆರಿಯಾ ಮತ್ತು ಯೂದಾಯದ ಕಡೆಗೆ ಮಾಡಿದನು, ಆತನು ದೃಢಮನಸ್ಸಿನಿಂದ ಯೆರೂಸಲೇಮ ಮತ್ತು ಶಿಲುಬೆಯ ಕಡೆಗೆ ಪ್ರಯಾಣಿಸಿದನು. ಯೇಸು ಬೇರೆ ಜನರ ಗುಂಪಿನೊಂದಿಗೆ ಸಂವಹನ ಮಾಡಿರುವದರ ಕುರಿತು ಈ ಅಧ್ಯಾಯಗಳು ವಿಸ್ತಾರವಾಗಿ ವಿವರಿಸುತ್ತವೆ. ಸಾಮಾನ್ಯವಾಗಿ ಹೇಳುವುದಾದರೆ, ಜನರು ಮಧ್ಯದಲ್ಲಿ ಆತನು ಸ್ವೀಕರಿಸಲ್ಪಟ್ಟನು.

19ನೇ ಅಧ್ಯಾಯವು ಮುಖ್ಯವಾಗಿ ಮೂರು ವಿಭಾಗಗಳನ್ನಾಗಿ ಮಾಡಬಹುದು. ಮೊದಲನೆಯ ವಿಭಾಗದಲ್ಲಿ, ವಿಚ್ಛೇದನದ ಕುರಿತು ಫರಿಸಾಯರು ಕೇಳಿದ ಪ್ರಶ್ನೆಗಳಿಗೆ ಯೇಸು ಉತ್ತರಿಸಿದ್ದು ಇದೆ (19:1-12). ಎರಡನೆಯ ವಿಭಾಗದಲ್ಲಿ, ಮಕ್ಕಳನ್ನು ಆತನು ಸ್ವಾಗತಿಸಿ ಮತ್ತು ಆಶೀರ್ವದಿಸಿದನು (19:13-15). ಕೊನೆಯ ಭಾಗದಲ್ಲಿ ಐಶ್ವರ್ಯದ ಅಂಶದ ಕುರಿತು ಮತ್ತು ಯೇಸು ಒಬ್ಬ ಶ್ರೀಮಂತ ಯೌವನಸ್ಥನೊಂದಿಗೆ ಮಾತಾಡಿದರ ವಿಷಯವಾಗಿ ಇದರಲ್ಲಿ ಕಂಡುಕೊಳ್ಳುತ್ತೇವೆ (19:16-30).

## ಪೆರಿಯಾದ ಕಡೆಗೆ ಯೇಸು ಪ್ರಯಾಣ (19:1, 2)

**1ಯೇಸು ಈ ಮಾತುಗಳನ್ನು ಮುಗಿಸಿದ ಮೇಲೆ ಗಲಿಲಾಯವನ್ನು ಬಿಟ್ಟು ಯೊರ್ದನ್ ಹೊಳೆಯ ಆಚೆ ಪ್ರಯಾಣಮಾಡಿ ಯೂದಾಯ ಪ್ರಾಂತ್ಯಕ್ಕೆ ಬಂದನು. 2ಬಹುಜನರು ಆತನ ಹಿಂದೆ ಗುಂಪುಗುಂಪಾಗಿ ಹೋದರು, ಆತನು ಅವರನ್ನು ಅಲ್ಲಿಯೇ ಸ್ವಸ್ಥಮಾಡಿದನು.**

**ವಚನ 1.** ಈ ಸ್ಥಿತ್ಯಾಂತರ ಬದಲಾವಣೆಯ ವಾಕ್ಯವು ಮತ್ತಾಯ ಸುವಾರ್ತೆಯಲ್ಲಿ ಐದು ಪಾಲು ಬಾಹ್ಯರೂಪಗೊಂಡಿದೆ: **ಈ ಮಾತುಗಳನ್ನು ಮುಗಿಸಿದ ಮೇಲೆ** (ನೋಡಿರಿ 7:28; 11:1; 13:53; 26:1). ಇಲ್ಲಿ, ಯೇಸುವಿನ ನಾಲ್ಕನೇ ವಿಭಾಗದ ಬೋಧನೆ ಮುಕ್ತಾಯವಾಗುತ್ತದೆ ಎಂದು ಸೂಚಿಸುತ್ತದೆ (ಅಧ್ಯಾಯ 18). ಈ ಸಮಯದಲ್ಲಿ, ಯೇಸು **ಗಲಿಲಾಯವನ್ನು** ಬಿಟ್ಟು ತಾನು ಮರಣಹೊಂದಿ ಪುನರುತ್ಥಾನವಾದ ತರುವಾಯ ನಿಶ್ಚಯವಾಗಿ ಹೋಗುವ ಬೆಟ್ಟವನ್ನು ಆತನು ಗುರುತಿಸಿ ಅಲ್ಲಿಗೆ ಹೋದನು (28:16, 17; ಯೋಹಾನ 21:1).

ಯೇಸು "ಪೆರಿಯಾದ ಸೇವೆ"ಯನ್ನು ಹಂಚ್ಚುಕೊಳ್ಳಲು ಹೊರಟರು, ಈ ಸೇವೆಯು 19:1-20:28ರ ಅಧ್ಯಾಯಗಳು ಹೊಂದಿಕೊಂಡಿರುತ್ತವೆ.[1] "ಪೆರಿಯ" ಎನ್ನುವ ಹೆಸರು **ಯೂದಾಯ ಪ್ರಾಂತ್ಯದ** (ಪೂರ್ವ ದಿಕ್ಕಿನ) **ಯೊರ್ದನ್** ಹೊಳೆಯ ಆಚೆಯ ಪ್ರದೇಶಕ್ಕೆ ಕೊಡಲಾಗಿದೆ, ಇದನ್ನು (*peran*) ಗ್ರೀಕ್ ಶಬ್ದದಿಂದ ತೆಗೆದುಕೊಳ್ಳಲಾಗಿದೆ, ಇದರ ಅರ್ಥ "ಆಚೆ," "ದಾಟಿ" ಅಥವಾ "ಇನ್ನೊಂದು ಬದಿ" ಎನ್ನುವ ಅರ್ಥವನ್ನು ಕೊಡುತ್ತದೆ. ಯಾದಾಯದ ನೋಟವನ್ನು "ಯೋರ್ದನ್ ಆಚೆ" ಎಂದು ವರ್ಣಿಸಲಾಗಿದೆ (4:25; 19:1; ಮಾರ್ಕ 3:8; 10:1; ಯೋಹಾನ 1:28; 3:26; 10:40). "ಪೆರಿಯ" ಎಂಬ ಹೆಸರು ಹೊಸ

ಒಡಂಬಡಿಕೆಯಲ್ಲಿ ಇಲ್ಲ ಈ ಹೆಸರು Josephus ರವರ ಬರವಣಿಗೆಗಳಲ್ಲಿ ಕಾಣಿಸುತ್ತದೆ.[2]

ಈ ಆಡಳಿತ ಪ್ರದೇಶವು ಉತ್ತರದಲ್ಲಿ ಯರಮುಕ ನದಿ ದಕ್ಷಿಣದಲ್ಲಿ ಅರ್ನ್ಮಾನ ನದಿಯಿಂದ ವಿಸ್ತಾರದೊಂದಿಗೆ ಚಾಚಿಕೊಂಡಿದೆ. ಈ ಭಾಗವನ್ನು ಕೆಲವು ಸಾರಿ ಯೋರ್ದನನ ಇನ್ನೊಂದು ಬದಿ ಎಂದು ಗುರುತಿಸುತ್ತಾರೆ. ಇಂದು, ಈ ಆಡಳಿತ ಪ್ರದೇಶದ (ಹೆಚ್ಚಿನ ಭಾಗವು) ಭಾಗವು ಯೋರ್ದನ ಭಾಗವೆಂದು ಕಂಡು ಬರುತ್ತದೆ ಅದೇ ಹೆಸರಿನಿಂದ ಅದನ್ನು ಗುರುತಿಸುತ್ತಾರೆ.

ಮತ್ತಾಯನು ಬಳಸಿರುವ ಭಾಷಾ ಶಬ್ದದಿಂದ ಒಂದು ಪ್ರಶ್ನೆ ಎದ್ದೇಳುತ್ತದೆ, ಪೆರಿಯ ಎನ್ನುವದು ಯೂದಾಯ ಭಾಗದಲ್ಲಿ ಉಪಯೋಗಿಸುವ ಪಾರಿಭಾಷಿಕ ಶಬ್ದವಾಗಿರಲಿಲ್ಲ. ಯೋರ್ದನ್ ನದಿಯು ಸಾಮಾನ್ಯವಾಗಿ ಎರಡು ಆಡಳಿತ ಪ್ರದೇಶದ ಮಧ್ಯದಲ್ಲಿ ವಿಭಾಗವಾಗುತ್ತದೆ. ಯೇಸು "ಯೂದಾಯ ಪ್ರಾಂತಕ್ಕೂ ಯೋರ್ದನ್ ಹೊಳೆಯ ಆಚೆಯ ಸೀಮೆಗೂ" ಬಂದನು ಎಂದು ಮಾರ್ಕನು 10:1ರಲ್ಲಿ ಸಂಕ್ಷಿಪ್ತವಾಗಿ ಸೇರಿಸಲಾಗಿದೆ, ಅಲ್ಲಿ ಗುರುತಿಸಿರುವ ಸ್ಥಳಗಳು ಎರಡು ಭಾಗಗಳನ್ನಾಗಿ ಬೇರೆ ಬೇರೆ ಸ್ಥಳಗಳನ್ನಾಗಿ ವಿಭಾಗಿಸಲಾಗಿದೆ.

ಯೆಹೂದ್ಯ ಯಾತ್ರಿಕರು ಗಲಿಲಾಯದಿಂದ ಯೆರೂಸಲೇಮಿಗೆ ಪ್ರಯಾಣಿಸುವಾಗ ಅವರು ಉತ್ತರ ಭಾಗದಲ್ಲಿ ಯೋರ್ದನ್ ದಾಟಿಕೊಂಡು, ಪೆರಿಯಾ ಮುಖಾಂತರ ಪೂರ್ವಕ್ಕೆ ಪ್ರಯಾಣಿಸಿ, ದಕ್ಷಿಣದಲ್ಲಿ ಯೂದಾಯದ ಹಿಂದಿನ ಭಾಗಕ್ಕೆ ಪ್ರಯಾಣ ಮಾಡಿಕೊಂಡು ಹೋಗುತ್ತಿದ್ದರು. ಈ ರೀತಿಯಾಗಿ ಹೋಗುವದರಿಂದ ಅವರು ಸಮಾರ್ಯರ ಆಡಳಿತ ಪ್ರದೇಶದ ಹೊರಭಾಗದಿಂದ ಹೋದಂತೆ ಆಗುತ್ತಿತ್ತು, ಅವರನ್ನು ವೈರಿಗಳೆಂದೇ ಇವರು ಪರಿಗಣಿಸಿದರು. ಈ ಸನ್ನಿವೇಶದಲ್ಲಿ ಯೇಸು ಈ ಮಾರ್ಗವನ್ನು ಆಯ್ದುಕೊಳ್ಳಲಿಲ್ಲ. ಅದರ ಬದಲಾಗಿ ಲೂಕನು ಹೇಳಿದಂತೆ, ಆತನು ಗಲಿಲಾಯ ಮತ್ತು ಸಮಾರ್ಯದ ಮಧ್ಯದಲ್ಲಿ ಪ್ರಯಾಣಿಸಿ ಪೆರಿಯಾ ಭಾಗವನ್ನು ಪ್ರವೇಶಿಸಿದನು (ಲೂಕ 9:51-56; 13:22; 17:11).

ಯೇಸು ಪೆರಿಯಾ ಪ್ರಾಂತದಲೆಲ್ಲಾ ಸಂಚರಿಸಿ ಯೂದಾಯಕ್ಕೆ ಹಿಂತಿರುಗಿದನು. ಯೆರಿಕೋ ಮಾರ್ಗದಿಂದ ಹಾದುಕೊಂಡು (20:29) ಯೆರೂಸಲೇಮಿಗೆ ಹೋದನು (20:17; 21:1, 10). ಈ ಪ್ರಾಂತದಲ್ಲಿ, ಯೇಸು ತನ್ನ ಸೇವೆಯ ಭಾಗವಾಗಿರುವ ಅದ್ಭುತ ಕಾರ್ಯಗಳನ್ನು ಮಾಡುವದು ಮತ್ತು ಬೋಧಿಸುವ ಕಾರ್ಯವನ್ನು ಪೂರ್ಣಗೊಳಿಸಿದನು, ಆತನು ತನ್ನ ಏಕಾಗ್ರತೆಯನ್ನು ಸಂಪೂರ್ಣವಾಗಿ ತನ್ನ ಮರಣದ ಕುರಿತು ಹೊಂದಿರುವ ಅಭಿಪ್ರಾಯದ ಕಡೆಗೆ ಬದಲಾಯಿಸಿದನು.

**ವಚನ 2.** ಯೇಸುವಿನ ಸುತ್ತು **ಬಹು ಜನರು** ಸೇರಿ ಬಂದಿದ್ದರು. ಆತನು ಮಾಡುವ ಕಾರ್ಯದಂತೆಯೇ, ಜನರ ಮೇಲೆ ಕರುಣೆ ತೋರಿದನು ಮತ್ತು ಅವರ ಮಧ್ಯದಲ್ಲಿ ಇರುವ ಅಸ್ವಸ್ಥರನ್ನು ಆತನು **ಗುಣಪಡಿಸಿದನು** (4:23, 24; 9:35; 14:35, 36; 15:30, 31).

## ಫರಿಸಾಯರ ಪ್ರಶ್ನೆ (19:3-9)

**3ಆಗ ಫರಿಸಾಯರು ಆತನ ಹತ್ತಿರಕ್ಕೆ ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ - ಒಬ್ಬನು ಯಾವದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟುಬಿಡುವದು ಧರ್ಮವೋ ಹೇಗೆ ಎಂದು ಕೇಳಿದ್ದಕ್ಕೆ 4ಆತನು - ಮನುಷ್ಯರನ್ನು ನಿರ್ಮಾಣಮಾಡಿದವನು ಆದಿಯಿಂದಲೇ ಅವರನ್ನು 5ಗಂಡುಹೆಣ್ಣಾಗಿ ನಿರ್ಮಿಸಿ ಅವರ ವಿಷಯದಲ್ಲಿ - ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು ಎಂದು ಹೇಳಿದವನೆಂಬುದಾಗಿ ನೀವು ಓದಲಿಲ್ಲವೋ? 6ಹೀಗಿರುವಲ್ಲಿ ಅವರು ಇನ್ನು ಇಬ್ಬರಲ್ಲ, ಒಂದೇ ಶರೀರವಾಗಿದ್ದಾರೆ. ಆದದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಅಂದನು. 7ಅವರು ಆತನನ್ನು - ಹಾಗಾದರೆ ತ್ಯಾಗಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಯಾಕೆ ಅಜ್ಞೆಕೊಟ್ಟನು ಎಂದು ಕೇಳಲು ಆತನು - 8ಮೋಶೆಯು ನಿಮ್ಮ**

**ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು ಬಿಟ್ಟುಬಿಡುವದಕ್ಕೆ ಅಪ್ಪಣೆಕೊಟ್ಟನು; ಆದರೆ ಆದಿಯಿಂದಲೇ ಹಾಗೆ ಇರಲಿಲ್ಲ. [9]ಮತ್ತು ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು.**

ಈ ಸ್ಥಳದಲ್ಲಿ ವಿಚ್ಛೇದನ ಮತ್ತು ಮರುಮದುವೆಯಾಗುವ ಸಂಕಷ್ಟದ ವಿಷಯವನ್ನು ಯೇಸುವಿನ ಮುಂದೆ ಇಟ್ಟರು. ಈ ಮೂಲ ಪಾಠವು ಇದು ಇಂದಿನ ದಿನದಲ್ಲಿದ್ದಂತೆಯೇ, ಕ್ರಿಸ್ತನ ಕಾಲದಲ್ಲಿಯೂ ಇದು ಭೀಕರ ಸಮಸ್ಯೆಯ ವಿಷಯವಾಗಿತ್ತು ಎಂದು ವಿವರಿಸುತ್ತದೆ. ವಿಚ್ಛೇದನವು ಪುರುಷರಿಗೆ ಅದು ಸಹಜವಾದ ಕಾರ್ಯವಾಗಿತ್ತು ಅವರ ಆಹಾರವನ್ನು ಸುಟ್ಟದ್ದಕ್ಕಾಗಿ ಅಥವಾ ಬಹಿರಂಗವಾಗಿ ಅವರನ್ನು ಅಪ್ಪಿಕೊಳ್ಳುವಂತಹ ಕ್ಷುಲ್ಲಕ ಕಾರಣಗಳಿಗಾಗಿ ತಮ್ಮ ಹೆಂಡತಿಯರನ್ನು ದೂರವಿಡುತ್ತಿದ್ದರು.

ಯೇಸುವಿನ ಪ್ರತಿಕ್ರಿಯೆ ಬಹಳ ಹತ್ತಿರದಿಂದ ಅಭ್ಯಾಸ ಮಾಡುವಾಗ, ಆತನು ವಿಚ್ಛೇದನವನ್ನು ಸಮರ್ಥಿಸಲಿಲ್ಲ, ಮತ್ತು ಅದನ್ನು ಆಜ್ಞಾಪಿಸಲಿಲ್ಲ. ಅದರ ಬದಲಾಗಿ ಆತನು ವಿಚ್ಛೇದನದಿಂದ ದುಷ್ಟಪರಿಣಾಮಗಳನ್ನು ತೋರಿಸಿದನು ಮತ್ತು ಹೇಗೆ ಅದು ವ್ಯಭಿಚಾರಕ್ಕೆ ಮತ್ತು ಅಪವಿತ್ರಕ್ಕೆ ನಡೆಸುತ್ತದೆ ಎಂದು ತೋರಿಸಿದನು.

ಯಾವ ಒಲ್ಲದ ಮನಸ್ಸಿನಿಂದ ದೇವರು ಅದನ್ನು ದೈವಿಕ ಒತ್ತಾಯಕ್ಕೆ ತಿರುಗಿಸಿದನು. ಮೋಶೆಯ ಮುಖಾಂತರ ದೇವರು ವಿಚ್ಛೇದನವನ್ನು ಗುರುತಿಸಿ ಅನುಮೋದಿಸಿದನು; ಆದರೆ ಇದು ದೇವರ ಅಭಿಪ್ರಾಯವಾಗಿರಲಿಲ್ಲವೆಂದು ಯೇಸು ಅವರಿಗೆ ಬೋಧಿಸಿದನು. ಆತನು ವಿಚ್ಛೇದನವನ್ನು ಉದಾರವಾದದ್ದನ್ನಾಗಿ ಮಾಡಲಿಲ್ಲ; ಅದನ್ನು ಹತೋಟಿಗೆ ತಂದನು, ಅದನ್ನು ಕಾರ್ಯರೂಪಕ್ಕೆ ಬರಲು ಕಠಿಣತೆಯನ್ನುಂಟು ಮಾಡಿದನು. ಮದುವೆಯ ಸಂಬಂಧದಲ್ಲಿ ದೇವರು ಆರಂಭದಲ್ಲಿ ಯೋಚಿಸಿದ ಪವಿತ್ರತೆಯನ್ನು ಪುನಃ ಸ್ಥಾಪಿಸಲು ಯೇಸು ಬಯಸಿದನು.

**ವಚನ 3.** ಪೆರಿಯ ಪ್ರದೇಶವನ್ನು ಹೆರೋದ ಅಂತಿಪನು ಆಳುತ್ತಿದ್ದನು. ಜೋಸೆಫಸ್ ರವರ ಪ್ರಕಾರ, ಸ್ನಾನಿಕನಾದ ಯೋಹಾನನನ್ನು ಸೆರಮನೆಯಲ್ಲಿಟ್ಟು ಅಲ್ಲಿಯೇ ಅವನು ಮರಣ ಹೊಂದಿರುವ ಸ್ಥಳ ಪೆರಿಯಾ ಆಗಿದೆ. ಈ ಅನ್ಯಾಯದ ಫಲವೇ ಪ್ರವಾದಿಯೂ ಇಲ್ಲಿ ಹೆರೋದನ ಅನೀತಿಯ ಮದುವೆಯ ಸಂಬಂಧವನ್ನು ಬಹಿರಂಗವಾಗಿ ಖಂಡಿಸಿದನು. ಅವನು ನಾಬೋತನ ಹೆಂಡತಿಗೆ ವಿಚ್ಛೇದನ ಕೊಟ್ಟು ತನ್ನ ಸಹೋದರ ಫಿಲಿಪ್ಪಿ I ಅವನ ಹೆಂಡತಿಯನ್ನು ಮದುವೆ ಮಾಡಿಕೊಂಡನು (14:3, 4ರ ಮೇಲಿನ ವ್ಯಾಖ್ಯಾನ ನೋಡಿರಿ). ಇದರ ಐತಿಹಾಸಿಕ ಹಿನ್ನಲೆ ಈ ಕ್ಷೇತ್ರದಲ್ಲಿ ವಿಚ್ಛೇದನ ಕುರಿತು ಹೆಚ್ಚಾಗಿ ಚರ್ಚಿಸಲಾಗಿದ್ದ ನಂತರದ ಸಲಹೆ ಮೇರೆಗೆ **ಫರಿಸಾಯರು** ಇದರ ಕುರಿತಾಗಿ **ಯೇಸುವಿಗೆ** ಕೇಳಿದರು ಎಂದು ಹೇಳುತ್ತದೆ. ಬಹುಶಃ ಅವರು ಯೇಸುವನ್ನು ಹೆರೋದನು ಮತ್ತು ಹೆರೋದ್ಯಳ ಸಂಕಷ್ಟದ ವಿಷಯದಲ್ಲಿ ಗೊಂದಲಕ್ಕೆ ಸಿಕ್ಕಿಸಲು ಪ್ರಯತ್ನ ಮಾಡುತ್ತಾ ಇದ್ದಿರಬಹುದು. ಯೋಹಾನನು ಸಂಕಷ್ಟ ಎದುರಿಸಿದಂತೆಯೇ ಯೇಸು ಸಹ ಎದುರಿಸಿರಬಹುದು.

ಫರಿಸಾಯರು ಆತನಿಗೆ, **ಒಬ್ಬನು ಯಾವದಾದರೂ ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ** ಎಂದು ಕೇಳಿದರು. ವಿಚ್ಛೇದನವು ಯೆಹೂದ್ಯ ಮತದಲ್ಲಿ ಗಂಡಸರಿಗೆ ವಿಶೇಷ ಹಕ್ಕು ಆಗಿತ್ತು.[3] ಕೆಲವು ಸಂದರ್ಭಗಳಲ್ಲಿ ಸ್ತ್ರೀಯು ತನ್ನ ಗಂಡನು ವಿಚ್ಛೇದನ ಕೊಡುವಂತೆ ನ್ಯಾಯಲಯವನ್ನು ಕೇಳಿಕೊಳ್ಳುತ್ತಿದ್ದರು.[4] ಹೆರೋದನ ಕುಟುಂಬದಿಂದ ಕೆಲವು ಹೆಂಗಸರು ತಮ್ಮ ಗಂಡಂದಿರಿಗೆ ವಿಚ್ಛೇದನ ಕೊಟ್ಟಿದ್ದರು, ಆದರೆ ಇದನ್ನು ಹೆಚ್ಚಿನ ಸಂಖ್ಯೆಯ ಯೆಹೂದ್ಯರು ಅತ್ಯಾಚಾರವೆಂಬಂತೆ ಅಭಿಪ್ರಾಯಪಟ್ಟರು. ಅಂಥಹ ವಿಷಯಕ್ಕೆ ಸಂಬಂಧಿಸಿದಂತಹ ಒಂದು ಸನ್ನಿವೇಶವನ್ನು ಕುರಿತು, ಜೋಸಿಫಸ್ ಅವರು ಹೀಗೆ ಬರೆದಿದ್ದಾರೆ,

> ಸಲೋಮೆ ಎನ್ನುವವಳು ["ಮಹಾ ಹೆರೋದನ ಸಹೋದರಿ"] Costobarus, ನೊಂದಿಗೆ ಜಗಳಮಾಡಿಕೊಂಡಿದ್ದಳು, ಆಕೆಯು ಆತನಿಗೆ ವಿಚ್ಛೇದನ ಪತ್ರ ಕಳುಹಿಸಿದಳು, ಮತ್ತು ಯೆಹೂದ್ಯರ ನಿಯಮವಾಗಿರಲಿಲ್ಲದಿದ್ದರೂ ಆತನೊಂದಿಗೆ ಆಗಿರುವ ಮದುವೆ ವಿಸರ್ಜಿಸುವಂತೆ ಕೇಳಿದಳು; ನಮ್ಮಲ್ಲಿ ಅದನ್ನು ಗಂಡನು ಮಾಡಬೇಕಿತ್ತು; ಆದರೆ ಹೆಂಡತಿ ಮಾಡಿದ್ದಾಳೆ, ಆಕೆಯು ಗಂಡನಿಂದ ಬಿಟ್ಟುಹೋದಾಗ ನಂತರ ಆಕೆಯು ಇನ್ನೊಬ್ಬನೊಂದಿಗೆ ಮದುವೆ ಆಗಲು ಸಾಧ್ಯವಿಲ್ಲ, ಆಕೆಯ ಮೊದಲ ಗಂಡನು ಆಕೆಯನ್ನು ದೂರಮಾಡಿದ ಹೊರತು ಇದು ಸಾಧ್ಯವಿಲ್ಲ.[5]

ನಂತರ, ಆತನು ಹೀಗೆ ಬರೆದನು, "ಹೆರೋದ್ಯಳು ನಮ್ಮ ದೇಶದ ನಿಯಮಗಳನ್ನು ತನ್ನ ಮೇಲೆ ಹಾಕಿಕೊಂಡು ಗೊಂದಲವನ್ನುಂಟು ಮಾಡಿದಳು, ಮತ್ತು ಗಂಡನು ಜೀವಂತವಾಗಿರುವಾಗಲೇ ಆಕೆಯು ಆತನಿಗೆ ವಿಚ್ಛೇದನ ಕೊಟ್ಟಳು, ಮತ್ತು ಹೆರೋದನನ್ನು [ಅಂತಿಪ], ತಂದೆಯ ಕಡೆಯಿಂದ ತನ್ನ ಗಂಡನ ಸಹೋದರನನ್ನು ಮದುವೆ ಆಗಲು ಹೀಗೆ ಮಾಡಿದಳು."[6] ಈ ಶ್ರೀಮಂತ ವರ್ತನೆಯ ಹೆಂಗಸು ಗ್ರೀಕ್ ರೋಮನ್ ಸಂಸ್ಕೃತಿಯ ಪ್ರಭಾವದಿಂದ ಹೀಗೆ ಮಾಡಿದಳು ಯಾಕೆಂದರೆ ಅಲ್ಲಿ ಹೆಂಗಸರು ತಮ್ಮ ಗಂಡಂದಿರಿಗೆ ವಿಚ್ಛೇದನ ಕೊಡುವದು ಸ್ವೀಕಾರ ಮಾಡುವಂಥದ್ದಾಗಿತ್ತು (ನೋಡಿರಿ 1 ಕೊರಿಂಥ 7:12, 13).

"ಯಾವುದಾದರು ಒಂದು ಕಾರಣದಿಂದ" ಎಂಬುದರೊಂದಿಗೆ ಮತ್ತಾಯನ ಸುವಾರ್ತೆ ಪ್ರಶ್ನೆಗೆ ಯೋಗ್ಯತೆಯನ್ನುಂಟು ಮಾಡಿತು (ನೋಡಿರಿ ಮಾರ್ಕ 10:2). ಆತನ ಯೆಹೂದ್ಯ ಓದುಗರು ಯೆರೂಸಲೇಮಿನಲ್ಲಿ ನಡೆಯುವ ಸಮಕಾಲಿನ ಚರ್ಚೆಯೊಂದಿಗೆ ಸುಪರಿಚಿತವಾಗಿದ್ದರು. ಫರಿಸಾಯರು ವಿಚ್ಛೇದನ ಕೊಡಲು ಅವಕಾಶವಿದೆ*ಯೋ* ಎಂದು ಪ್ರಶ್ನೆ ಕೇಳಲಿಲ್ಲ, ಏಕೆಂದರೆ ಪ್ರತಿಯೊಬ್ಬ ಯೆಹೂದ್ಯನು ಅದನ್ನು ಕಲ್ಪಿಸಿಕೊಳ್ಳುವಂಥದ್ದಾಗಿದೆ. ಅದರ ಬದಲಾಗಿ ಅವರು, ವಿಚ್ಛೇದನ ಕೊಡಲು *ಮೂಲಕಾರಣವನ್ನು* ಕೇಳುತ್ತಿದ್ದರು. "ಯಾವದಾದರು ಒಂದು ಕಾರಣ" ಎಂಬ ವಾಕ್ಯದ ಅರ್ಥ "ಗಂಡನು ಹೇಳಬಹುದಾದದ್ದು" ಎಂದಾಗಿದೆ. Josephus ಹೇಳಿದ್ದೇನೆಂದರೆ ಗಂಡನು ತನ್ನ ಹೆಂಡತಿಗೆ ವಿಚ್ಛೇದನ ಪತ್ರವನ್ನು "ಯಾವುದಾದರು ಕಾರಣವನ್ನು" ತೋರಿಸಿ ಕೊಡಬಹುದು ಮತ್ತು ನಂತರ "ಪುರುಷರ ಮಧ್ಯದಲ್ಲಿ ಆಗಿರುವ ಅನೇಕ ಕಾರಣಗಳನ್ನು ಅವರು ಸೇರಿಸಬಹುದು."[7]

ಕೆಲವು ಯೆಹೂದ್ಯ ನಾಯಕರು ವಿಚ್ಛೇದನವನ್ನು ಕುರಿತು ಧರ್ಮೋಪದೇಶಕಾಂಡ 24:1-4ರ ಮೇಲಿನ ಮೋಶೆಯ ಬೋಧನೆಯ ಮೇಲೆ ತಪ್ಪಾದ ವಿವರಣೆಯನ್ನು ನೀಡಿ ಉದಾರ ವಾದವನ್ನು ಮಾಡುತ್ತಿದ್ದರು. ಯೇಸುವಿನ ಕಾಲದ, ಎರಡು ಆಲೋಚನ ಶಾಲೆಗಳಲ್ಲಿ ವಿಚ್ಛೇದನ ಸರಿಯಾದ ಮೂಲ ಕಾರಣಕ್ಕೆ ಸಂಬಂಧಿಸಿದ ವಿಷಯಗಳು ಇದ್ದವು. ಈ ಎರಡು ಶಾಲೆಗಳ ಬೋಧನೆಗಳು ಧರ್ಮೋಪದೇಶಕಾಂಡ 24:1-4ರ ಆಧಾರದ ಮೇಲೆ ಬೋಧಿಸುತ್ತಿದ್ದರು (5:31ರ ಮೇಲಿನ ವ್ಯಾಖ್ಯಾನ ನೋಡಿರಿ). Shammai ಎನ್ನುವ ಶಾಲೆಯು, ಎರಡರಲ್ಲಿ ಬಹಳ ಕಾಪಾಡುವಂಥದ್ದಾಗಿದೆ. ಮೋಶೆಯು ಮಾತಾಡಿದ್ದರಲ್ಲಿ "ಅಸಭ್ಯವಾದದ್ದು" ವ್ಯಭಿಚಾರದ ಕುರಿತಾಗಿದೆ ಎಂದು ಶಮ್ಮೈ ಶಾಲೆಯವರು ನಂಬುತ್ತಿದ್ದರು. ಅವನು ಈ ನಿಯಮದೊಂದಿಗೆ ಈ ಅಂಶವನ್ನು ಹೇಗೆ ಹೊಂದಿಸಿದನು ನಮಗೆ ಗೊತ್ತಿಲ್ಲ ಆ ನಿಯಮವು ವ್ಯಭೀಚಾರ ಮಾಡಿದವರಿಗೆ ವಿಚ್ಛೇದನವಲ್ಲ ಮರಣ ಶಿಕ್ಷೆಯೆಂದು ಹೇಳುತ್ತದೆ (ಯಾಜಕಕಾಂಡ 20:10-14; ಧರ್ಮೋಪದೇಶಕಾಂಡ 22:22). Hillel ಎನ್ನುವ ಶಾಲೆ ಇವೆರಡರಲ್ಲಿ ಬಹಳ ಉದಾರವಾದದ್ದು, ಇದು ಬೋಧಿಸುವದೇನೆಂದರೆ, ಗಂಡನಿಗೆ ಮನನೋಯಿಸುವಂಥದ್ದು "ಅಸಭ್ಯವಾದದ್ದು" ಎಂದು ಬೋಧಿಸುತ್ತಿದ್ದರು.[8]

ದೈವ ಶಾಸ್ತ್ರದ ಅಧ್ಯಾಯನದ ಹಿನ್ನಲೆಯಿಂದ, ಈ ಫರಿಸಾಯರು ಯೇಸುವನ್ನು **ಪರೀಕ್ಷಿಸುವದಕ್ಕಾಗಿ** ಬಂದರು. "ಪರೀಕ್ಷಿಸು" ಎನ್ನುವ ಶಬ್ದ (*peirazō*)ವು ಅದನ್ನು "ಶೋಧನೆಗೊಳಪಡಿಸು" ಎಂದು ಸಹ ಅನುವಾದಿಸಬಹುದಾಗಿದೆ (16:1ರ ಮೇಲಿನ ವ್ಯಾಖ್ಯಾನ

ನೋಡಿರಿ). ಸತ್ಯವನ್ನು ನಿರ್ಧರಿಸುವದು ಅವರ ಉದ್ದೇಶವಲ್ಲ. ಅವರು ಯೇಸುವನ್ನು ಸತ್ಯವೇದ ಅಧ್ಯಾಯನದ ದೊಡ್ಡ ತಪ್ಪಿನಲ್ಲಿ ಹಿಡಿಯಲು ಹುಡುಕಿದರು. ಅವರು ಬಹುಶಃ ಆತನ ಉತ್ತರದಿಂದ ಜನರನ್ನು ಆತನ ವಿರುದ್ಧವಾಗಿ ತಿರುಗಿಸಲು ಪ್ರಯತ್ನಿಸುತ್ತಿದ್ದರು.

ಯೇಸು ಯಾವುದೇ ರೀತಿಯಲ್ಲಿ ಈ ಎರಡು ಶಾಲೆಯವರೊಂದಿಗೆ ಸೇರದಂತೆ ಆತನನ್ನು ಪ್ರಶ್ನಿಸುವವರಿಗೆ ಉತ್ತರಕೊಟ್ಟು ಆಶ್ಚರ್ಯವನ್ನುಂಟು ಮಾಡಿದನು. ಧರ್ಮೋಪದೇಶ ಕಾಂಡದಲ್ಲಿ ಬರೆದಿರುವ ಮೋಶೆಯ ಬೋಧನೆಯನ್ನು ಸಹ ಯೇಸು ನೋಡಲಿಲ್ಲ. ಅದರ ಬದಲಾಗಿ, ಯೇಸು ಮದುವೆಗಾಗಿ ದೇವರ ಮೂಲ ಯೋಜನೆ ಕಡೆಗೆ ಗಮನ ಹರಿಸಿದನು ಮತ್ತು ಪ್ರಾರಂಭದ ವಿಷಯಕ್ಕೆ ಆತನು ಹಿಂದಕ್ಕೆ ಹೋದನು (ಆದಿಕಾಂಡ 1:27; 2:24).

**ವಚನ 4.** ಯೇಸು ತನ್ನ ಉತ್ತರವನ್ನು **ನೀವು ಓದಲಿಲ್ಲವೋ?** ಎನ್ನುವ ಪ್ರಶ್ನೆಯೊಂದಿಗೆ ಪ್ರಾರಂಭಮಾಡಿದನು (ನೋಡಿರಿ 12:3; 21:16, 42; 22:31). ದೇವರು ಎರಡು ಬೇರೆ ಬೇರೆ ಲಿಂಗಜಾತಿಯನ್ನು, ಜನ್ಮಕೊಡುವದಕ್ಕೂ ಮತ್ತು ಜೊತೆಯಲ್ಲಿರುವದಕ್ಕಾಗಿ, **ಗಂಡುಹೆಣ್ಣಾಗಿ** ಉಂಟುಮಾಡಿದನು ಎಂದು ಯೇಸು ಹೇಳಿದನು. ಸೃಷ್ಟಿಯ ವಿಷಯದಲ್ಲಿ ವಾದಿಸುವವರನ್ನು ತೆಗೆದುಕೊಂಡು, ಸಾಧ್ಯವಾದಷ್ಟು ಬಲವಾದ ವಾದವನ್ನು ಆತನು ಮಾಡುತ್ತಿದ್ದನು. ಯೆಹೂದ್ಯ ಗುರುಗಳು ಹೀಗೆ ಹೇಳಿದರು, "ಹೆಚ್ಚಾಗಿ ಮೂಲ ಉತ್ಪತ್ತಿ, ಅಧಿಕೃತವಾಗಿರುತ್ತದೆ."[9] ದೇವರ ಮೂಲ ಉದ್ದೇಶದಲ್ಲಿ ಹೆಚ್ಚಿನ ಅಧಿಕಾರ ಮತ್ತು ಅಧಿಕೃತವಾದ ರುಜುವಾತುಗಳು ಒಳಗೊಂಡಿರುತ್ತದೆ.

ಆದಿಕಾಂಡ 1:27ರ ಗ್ರೀಕ್ ಹೇಳಿಕೆಯನ್ನು ಸೆಪ್ಟುಜೆಂಟ್‌ನಿಂದ ತೆಗೆದುಕೊಳ್ಳಲಾಗಿದೆ: "ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; *ಅವರನ್ನು ಗಂಡು ಹೆಣ್ಣಾಗಿ ಸೃಷ್ಟಿ ಮಾಡಿದನು*" (ಒತ್ತಿ ಹೇಳಿದ್ದು ಸೇರಿಸಿದ್ದು). ಆದಿಕಾಂಡ 5:2ರಲ್ಲಿ ಇದಕ್ಕೆ ಸರಿಸಮವಾಗಿರುವ ಶಬ್ದಗಳು ಉಪಯೋಗಿ ಸಲಾಗಿದೆ: "*ಆತನು ಅವರನ್ನು ಗಂಡು ಮತ್ತು ಹೆಣ್ಣಾಗಿ ಸೃಷ್ಟಿ ಮಾಡಿದನು,* ಮತ್ತು ಅವರನ್ನು ಆಶೀರ್ವದಿಸಿದನು ಮತ್ತು ಅವರಿಗೆ ಮನುಷ್ಯ ಎಂದು ಹೆಸರಿಟ್ಟನು" (ಒತ್ತಿ ಹೇಳಿದ್ದು ಸೇರಿಸಿದ್ದು).

ದೇವರು ಗಂಡು ಮತ್ತು ಹೆಣ್ಣಾಗಿ ಪರಿಪೂರ್ಣಮಾಡಿದನು ಮತ್ತು ಅವರು ಒಬ್ಬರನ್ನೊಬ್ಬರು ಪೂರಕವಾಗಿರುವರು (ಆದಿಕಾಂಡ 2:18, 24). ಈ ಮೂಲ ರಚನೆಯು ಎಲ್ಲಾ ಮುಂದಿನ ಪೀಳಿಗೆಗೆ ಮಾದರಿಯಾಗಿರುವುದು. ಇದರ ಸ್ವಭಾವ, ಅಲ್ಲಿ ಬಹುಪತ್ನಿತ್ವ[10] ಮತ್ತು ಬಹುಪತಿತ್ವ, ಮತ್ತು ವಿಚ್ಛೇದನ ಮತ್ತು ಮರು ಮದುವೆಗೆ ಅವಕಾಶ ಇರುವದಿಲ್ಲ. John Chrysostom ಅವರು ಹೀಗೆ ಬರೆದಿದ್ದಾರೆ, "ಇದು ಆತನ ಚಿತ್ತವಾಗಿದ್ದರೆ ಇದನ್ನು ಮಾರ್ಗದಲ್ಲಿಟ್ಟು ಇನ್ನೊಂದನ್ನು ತರುತ್ತಿದ್ದನು, ಒಬ್ಬ ಪುರುಷನನ್ನು ಮಾಡುವಾಗ, ಆತನು ಅನೇಕ ಸ್ತ್ರೀಯರನ್ನು ಉಂಟುಮಾಡುತ್ತಿದ್ದನು."[11] ದೇವರ ಅಭಿಪ್ರಾಯ ಒಂದೇ ಲಿಂಗಜಾತಿಯವರು ಲೈಂಗಿಕ ಕ್ರಿಯೆಯಲ್ಲಿ ತೊಡಗಬಾರದು ಎನ್ನುವದೇ ಆಗಿತ್ತು (ರೋಮಾಪುರ 1:26, 27). ಒಂದು ವೇಳೆ ಪುರುಷನು ಪುರುಷನೊಂದಿಗೆ ಮತ್ತು ಸ್ತ್ರೀಯು ಸ್ತ್ರೀಯೊಂದಿಗೆ ಸೇರಬೇಕೆಂದು ದೇವರ ಯೋಜನೆ ಆಗಿದ್ದರೆ, ಆತನು ಆದಾಮನಿಗಾಗಿ ಇನ್ನೊಬ್ಬ ಪುರುಷನನ್ನು ಮತ್ತು ಹವ್ವಳಿಗೆ ಇನ್ನೊಬ್ಬ ಸ್ತ್ರೀಯನ್ನು ಉಂಟುಮಾಡುತ್ತಿದ್ದನು. ದೇವರ ಉದ್ದೇಶವನ್ನು ಮನುಷ್ಯನು ಯಾವಾಗ ಭಂಗಗೊಳಿಸುವನೋ ಅದರ ಫಲ ನಾಶಹೊಂದುವ ಫಲವಾಗಿರುತ್ತದೆ.

**ವಚನ 5.** ಯೇಸು ಮುಂದೆ ಆದಿಕಾಂಡ 2:24ನ್ನು ತೆಗೆದುಕೊಂಡಿದ್ದಾನೆ: **ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು** ಗಂಡ ಹೆಂಡತಿಯರ ಮಧ್ಯದ ಸಂಬಂಧ ಅದು ಎಲ್ಲಾ ಸಂಬಂಧಗಳಿಗಿಂತ ಪ್ರಧಾನವಾಗಿದೆ. ಈ ಸಂಬಂಧವು ಮನುಷ್ಯನ ಮತ್ತು ಆತನ ತಂದೆ ತಾಯಿಗಳ ಸಂಬಂಧವನ್ನು ಮೀರಿಸುತ್ತದೆ, ಮದುವೆಯ ಸಂಬಂಧವು ಅದು "ಬಿಟ್ಟು

ಬಿಡುವ" ಮತ್ತು "ಸೇರಿ ಕೊಳ್ಳುವ" ತತ್ವವನ್ನು ಒಳಗೊಂಡಿದೆ (ನೋಡಿರಿ KJV). ಒಬ್ಬನು ತನ್ನ ತಂದೆ ತಾಯಿಗಳನ್ನು "ಬಿಟ್ಟುಬಿಡಬೇಕು" ಮತ್ತು "ಸೇರಿಕೊಳ್ಳಬೇಕು" ಅಥವಾ ತನ್ನ ಹೆಂಡತಿಗೆ "ಸೇರಿಕೊಂಡಿರಬೇಕು." "ಬಿಟ್ಟು ಬಿಡು" ಎನ್ನುವದಕ್ಕೆ ಗ್ರೀಕ್ ಶಬ್ದ (*kataleipō*) ಇದರ ಅರ್ಥ "ಬಿಟ್ಟು ಬಿಡು" ಎಂದಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ತಂದೆ ತಾಯಿಗಳನ್ನು ತ್ಯಜಿಸದಿದ್ದರೆ (15:3-6), ಅಲ್ಲಿ ಖಚಿತವಾಗಿ ಬೇರ್ಪಡಿಸುವಿಕೆಯ ಕಾರ್ಯನಡೆಯಬೇಕು. "ಸೇರಿಕೊಳ್ಳುವದು" ಅಥವಾ "ಸೇರಿಕೊಂಡಿರು" ಎನ್ನುವ ಪದವು (*kollaō*) "ಬಿಗಿಯಾಗಿ ಅಥವಾ ಗಟ್ಟಿಯಾಗಿ ಹಿಡಿದುಕೊಂಡಿರು" ಎಂಬ ಮೂಲ ಅರ್ಥವು ಕೊಡುತ್ತದೆ. ಮದುವೆ ಯಲ್ಲಿ, ಗಂಡ ಮತ್ತು ಹೆಂಡತಿ ಇಬ್ಬರು "ಒಂದೇ ದೇಹವಾಗಿರುತ್ತಾರೆ" (ಎಫೆಸ 5:28-31). ಈ ಒಂದು ಗೂಡುವಿಕೆ ದೈಹಿಕವಾಗಿ ಅವರು ಲೈಂಗಿಕ ಕ್ರಿಯೆಯಲ್ಲಿ ಒಂದಾಗುವುದರ ಮುಖಾಂತರ ತೋರ್ಪಡಿಸಿಕೊಳ್ಳುವರು (ನೋಡಿರಿ 1 ಕೊರಿಂಥ 6:16; 7:2-4).

**ವಚನ 6.** ಸೃಷ್ಟಿಯ ಆಧಾರದ ಮೇಲೆ, ಯೇಸು ಈ ರೀತಿಯಾಗಿ ಹೇಳಿದ್ದಾನೆ: **ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು ಅಂದನು.** "ಒಂದಾಗಿ ಸೇರು" ಎನ್ನುವದಕ್ಕೆ ಗ್ರೀಕ್ ಶಬ್ದ (*suzeugnumi*) ಇದರ ನಿರ್ದಿಷ್ಟವಾದ ಅರ್ಥ "ಒಂದಾಗಿ ನೊಗವನ್ನು ಹೊರು" ಎಂದಾಗುತ್ತದೆ. ದೇವರು ಮೊದಲ ದಂಪತಿಯನ್ನು ಒಂದಾಗಿ ಸೇರಿಸಿದ್ದಾನೆ, ಮೊದಲ ಮದುವೆ ಆಚರಣೆಯನ್ನು ಮಾಡಿದ್ದಾನೆ. ಮದುವೆ ಒಂದು ಪರಿಶುದ್ಧ ದೈವೀಕ ಕೂಡುವಿಕೆಯಾಗಿದೆ. ದೇವರ ಮೂಲ ಯೋಜನೆ ಜೀವನದುದ್ದಕ್ಕೂ ಒಬ್ಬ ಪುರುಷನಿಗೆ ಒಬ್ಬಳೆ ಸ್ತ್ರೀ ಎಂದು ಹೇಳುತ್ತದೆ (ಆದಿಕಾಂಡ 2:21-25). ದೇವರು ಇದಕ್ಕೆ ಕೊಡುವ ಅರ್ಥ ಈ ಕೂಡುವಿಕೆ ಶಾಶ್ವಾತವಾಗಿ ಇರಬೇಕು ಎನ್ನುವದೇ ಆಗಿತ್ತು. ಈ ಮದುವೆಯ ಕುರಿತು ಇರುವ ಮಹತ್ವದ ಅಂಶವು ಯೇಸುವಿನ ಕಾಲದಲ್ಲಿ ಒಂದು ಚಳುವಳಿಯನ್ನೇ ಉಂಟುಮಾಡಿತು, ಆ ವಿಷಯ ನಮ್ಮ ಇಂದಿನ ದಿನದಲ್ಲಿಯೂ ಹಾಗೆಯೇ ಇದೆ. R. T. France ರವರು ಹೀಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ: "ವಿಚ್ಛೇದನ ಮಾಡುವಾಗ *ಮನುಷ್ಯನು ದೇವರ* ಕಾರ್ಯವನ್ನು ಕೆಡಿಸುವವನಾಗಿದ್ದಾನೆ ಸಂಪೂರ್ಣ ವಿಷಯವನ್ನು ಅವನು ಮೂಲ ಉದ್ದೇಶದ ಹೊಸ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಾನೆ."[12]

ಅದರಿಂದ ದೇವರು ಪ್ರಥಮ ದಂಪತಿಗಳನ್ನು ಮದುವೆಯ ಮುಖಾಂತರ ಒಂದೇ ದೇಹವನ್ನಾಗಿ ಮಾಡಿದ್ದಾನೆ, ಈ ಬಂದನವನ್ನು ಈ ಕೂಡುವಿಕೆಯನ್ನು ಮುರಿದುಬಿಡಲು ಆತನಿಗೆ ಮಾತ್ರ ನಿಯಮ ಬದ್ಧವಾದ ಹಕ್ಕು ಇದೆ. ಆತನ ಸಂಕಲ್ಪದ ಮೇರೆಗೆ ಮದುವೆಯು ಮರಣದಲ್ಲಿ ಕೊನೆಗೊಳ್ಳುತ್ತದೆ, ಇದು ಜೀವಿಸುವದಕ್ಕಾಗಿ ಸಂಗಾತಿಯನ್ನು ಮಾಡಿಕೊಳ್ಳಲು ಮರು ಮದುವೆ ಮಾಡಿಕೊಳ್ಳಲು ಸ್ವತಂತ್ರರಾಗುತ್ತಾರೆ (ರೋಮಾಪುರ 7:1-3; 1 ಕೊರಿಂಥ 7:39). ಹೆಂಡತಿಯ ದಾಂಪತ್ಯದ ಅಪನಂಬಿಕೆಯಿಂದ ಮದುವೆಯ ಸಂಬಂಧ ಮುರಿದು ಹೋಗಬಹುದು, ಯಥಾರ್ಥವಾಗಿ ಇರುವ ಸಂಗಾತಿಯು ಮರುಮದುವೆ ಮಾಡಿಕೊಳ್ಳಲು ಸ್ವತಂತ್ರರಾಗಿರುತ್ತಾರೆ (5:31, 32; 19:9).

**ವಚನ 7.** ತರುವಾಯ ಫರಿಸಾಯನು, **ಹಾಗಾದರೆ ತ್ಯಾಗಪತ್ರವನ್ನು ಕೊಟ್ಟು ಆಕೆಯನ್ನು ಬಿಟ್ಟುಬಿಡಬಹುದೆಂದು ಮೋಶೆಯು ಯಾಕೆ ಅಜ್ಞೆಕೊಟ್ಟನು** ಎಂದು ಕೇಳಿದನು. ಮಾರ್ಕ ಸುವಾರ್ತೆಯಲ್ಲಿ ಈ ಹೇಳಿಕೆಯು ಹಿಂದೆ ಮುಂದೆ ಮಾಡಿ ಹೇಳಲಾಗಿದೆ. ಯೇಸು ಅವರಿಗೆ, "ಮೋಶೆ ನಿಮಗೆ ಏನು ಆಜ್ಞೆ ಮಾಡಿದನು?" ಎಂದು ಕೇಳಿದನು (ಮಾರ್ಕ 10:3, 4). ಮತ್ತು ಫರಿಸಾಯನು ಅದಕ್ಕೆ ಪ್ರತಿಕ್ರಿಯಿಸಿ, "ಮೋಶೆಯ ಪುರುಷನು ತನ್ನ ಹೆಂಡತಿಗೆ ವಿಚ್ಛೇದನ (ತ್ಯಾಗ) ಪತ್ರವನ್ನು ಕೊಟ್ಟು ಬಿಟ್ಟು ಬಿಡಲು ಅಪ್ಪಣೆ ಕೊಟ್ಟಿದ್ದಾನೆ" ಎಂದು ಹೇಳಿದನು. ವಿಚ್ಛೇದನ ಕುರಿತು ಯೆಹೂದ್ಯರು ಧರ್ಮೋಪದೇಶಕಾಂಡ 24:1-4ರ ಆಧಾರದ ಮೇಲೆಯೇ ಅವರು ಚರ್ಚೆಮಾಡುತ್ತಿದ್ದರು. ಪುರುಷನು ತನ್ನ ಹೆಂಡತಿಗೆ ತ್ಯಾಗ ಪತ್ರವನ್ನು ಕೊಟ್ಟು ತನ್ನ ಹೆಂಡತಿಯನ್ನು ಬಿಟ್ಟು ಬಿಡಬಹುದೆಂದು ಮೋಶೆಯು ತಮಗೆ ಅವಕಾಶವನ್ನು ಕೊಟ್ಟಿದ್ದಾನೆ

ಎಂದು ವಾದ ಮಾಡುತ್ತಿದ್ದರು (5:31ರ ಮೇಲಿನ ವ್ಯಾಖ್ಯಾನ ನೋಡಿರಿ).

**ವಚನ 8.** ಮದುವೆಯ ಸ್ಥಿರತೆಯನ್ನು ಸಮರ್ಥಿಸುತ್ತಾ ಯೇಸು ಅವರಿಗೆ ಉತ್ತರವನ್ನು ಕೊಟ್ಟನು. ಆತನು ಅವರನ್ನು ದೇವರ ಸೃಷ್ಟಿಗೆ ತೆಗೆದುಕೊಂಡು ಹೋದನು (ಆದಿಕಾಂಡ 1; 2). ಜನರು ಮೋಶೆಯ ಸಲಹೆ ಸೂಚನೆಗಳನ್ನು ಉಪಯೋಗಿಸುತ್ತಿದ್ದರು (ಧರ್ಮೋಪದೇಶಕಾಂಡ 24:1-4) ಇದರಿಂದ ಅವರು ತಮ್ಮ ಮದುವೆಯ ಒಪ್ಪಂದಗಳನ್ನು ಮುರಿದುಕೊಳ್ಳುತ್ತಿದ್ದರು. ಈ ಸಲಹೆ ಸೂಚನೆಗಳು ನಿಜಾಂಶದಲ್ಲಿ ಮದುವೆಯ ಪರಿಶುದ್ಧತೆ ಕಾಪಾಡಿಕೊಳ್ಳಲು ರಚಿಸಲ್ಪಟ್ಟಿವೆ.[13] ಫರಿಸಾಯರು ಹೇಳುವಂತೆ ವಿಚ್ಛೇದನ ಕೊಡಬೇಕೆಂದು ಮೋಶೆಯ *ಅಪ್ಪಣೆ ಆಗಿರಲಿಲ್ಲ* (19:7). ಯೇಸು ಇದನ್ನು ಹೇಳುವಾಗ ಇದರ ಸತ್ಯವನ್ನು ಕಡೆಗಣಿಸಿ ಹೇಳಿದ್ದಾನೆ, **ಮೋಶೆಯು ನಿಮ್ಮ ಮೊಂಡತನವನ್ನು ನೋಡಿ ನಿಮ್ಮ ಹೆಂಡರನ್ನು *ಬಿಟ್ಟುಬಿಡುವದಕ್ಕೆ* ಅಪ್ಪಣೆಕೊಟ್ಟನು** (ಒತ್ತಿ ಹೇಳಿದ್ದು ಸೇರಿಸಿದ್ದು). ವಿಚ್ಛೇದನವನ್ನು ಪ್ರೋತ್ಸಾಹಿಸಲು ಮೋಶೆ ಬರೆಯಲಿಲ್ಲ, ಆದರೆ ಅಲ್ಲಿಯ ಸಂದರ್ಭ ಹತೋಟಿ ಮೀರಿಹೋದಾಗ ಅದನ್ನು ತಹಬದಿಗೆ ತರುವದಕ್ಕಾಗಿ ಬರೆದಿದ್ದಾನೆ. ಕರ್ತನ ಉತ್ತರವು ಮೋಶೆ ಹೊಂದಿರುವ ಉದ್ದೇಶವು ಫರಿಸಾಯರಿಗೆ ಸ್ಪಷ್ಟಪಡಿಸಿತು.

ಮೋಶೆ ಯಾಕೆ ಈ ಅವಕಾಶವನ್ನು ಕೊಟ್ಟನು? ಯಾಕೆಂದರೆ (ಅವರ) **ಮೊಂಡತನವನ್ನು ನೋಡಿ** ಅಪ್ಪಣೆ ಕೊಟ್ಟನು ಎಂದು ಯೇಸು ಹೇಳಿದನು. ವಿಚ್ಛೇದನವು ದೇವರ ಆಲೋಚನೆಯ ನಿಮಿತ್ತವಾಗಿ ಬಂದಿರುವಂಥದಲ್ಲ, ಆದರೆ ಮಾನವನ ಸರಿಯಾದ ಮಾರ್ಗವನ್ನು ಬಿಟ್ಟು ಹೋಗಿರುವದರ ನಿಮಿತ್ತ ಇದು ಬಂದಿರುತ್ತದೆ. (**ಆದಿಯಿಂದಲೇ**) ದೇವ ಜನರು ಆತನ ಮೂಲ ಉದ್ದೇಶದ ಅಭಿಪ್ರಾಯವನ್ನು ಬಿಟ್ಟು ಜಾರಿಕೊಂಡು ದೂರ ಹೋಗುವವರಾಗಿದ್ದಾರೆ. ಆದುದರಿಂದ, ಆತನ ಕೃಪೆಯಲ್ಲಿ, ದೇವರು ಮನೆಯಲ್ಲಿ ಮತ್ತು ಕುಟುಂಬಗಳಲ್ಲಿ ಮುಂದೆ ಆಗುವ ಅವಘಡಗಳನ್ನು ತಪ್ಪಿಸಲು ಸದ್ಯದ ಪದ್ಧತಿಗಳನ್ನು ನಿಯಂತ್ರಿಸಲು ಮೋಶೆಗೆ ಆತನು ಅಪ್ಪಣೆ ಕೊಡುವಂತೆ ಮಾಡಿದನು. ದೇವರು ವಿಚ್ಛೇದನವನ್ನು ವಿರೋಧಿಸುತ್ತಾನೆಂದು ಮಲಾಕಿ ಪ್ರವಾದಿಯು ಬರೆಯುತ್ತಾನೆ (ಮಲಾಕಿ 2:14-16). ಈ ವಿಷಯದಲ್ಲಿ ದೇವರು ತನ್ನ ಮನಸ್ಸನ್ನು ಬದಲಾಯಿಸಿದನು ಎಂದು ಹೊಸ ಒಡಂಬಡಿಕೆಯು ಎಂದಿಗೂ ಸೂಚಿಸಿರುವದಿಲ್ಲ. ನಿಜಾಂಶವೇನೆಂದರೆ ಮತ್ತಾಯ 19:3-9 ಹೇಳುವ ಪ್ರಕಾರ ಮದುವೆಯ ಕುರಿತು ದೇವರ ಉದ್ದೇಶವನ್ನು ಮರುಸ್ಥಾಪಿಸಲು ಯೇಸು ಪ್ರಯತ್ನಿಸಿದನು.

**ವಚನ 9.** ಯೇಸು ಈ ಮಾತಿನೊಂದಿಗೆ ಮುಕ್ತಾಯ ಮಾಡಿದನು, **ಮತ್ತು ಹಾದರದ ಕಾರಣದಿಂದಲೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆಂದು ನಿಮಗೆ ಹೇಳುತ್ತೇನೆ ಅಂದನು.** ಮಾರ್ಕ 10:10 ಈ ವಚನವು ಶಿಷ್ಯರು ಮನೆಯಲ್ಲಿ ಕೇಳಿರುವ ಪ್ರಶ್ನೆಗೆ ಪ್ರತಿಕ್ರಿಯೆ ಎಂಬಂತೆ ಹೇಳುತ್ತದೆ. ಯೇಸುವಿನಿಂದ ಮೌನವು ಕಂಡುಬರುವಾಗ, ಆತನು ಈ ಮಾತುಗಳನ್ನು ಹೇಳುವ ಮೊದಲು, ಫರಿಸಾಯರು ಈ ದೃಶ್ಯದಿಂದ ಅವರು ಹೋಗಿದ್ದಾರೆ. ಈ ಅಧ್ಯಾಯದಲ್ಲಿ ವಚನ 10ರ ವರೆಗೆ ಶಿಷ್ಯರು ಎಂಬ ಸೂಚನೆ ಕೊಟ್ಟಿರುವದಿಲ್ಲ.

ಇಲ್ಲಿ ಕರ್ತನು ಬೋಧಿಸಿರುವ ಬೋಧನೆ ವಿಚ್ಛೇಧನ ಮತ್ತು ಮರುಮದುವೆಯ ವಿಷಯಗಳನ್ನು ಪರ್ವತ ಪ್ರಸಂಗದಲ್ಲಿ ಹೇಳಿರುವಂಥವುಗಳೇ ಆಗಿದ್ದವು: "ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳು *ವ್ಯಭಿಚಾರ ಮಾಡುವದಕ್ಕೆ* ಕಾರಣನಾಗುತ್ತಾನೆ; ಮತ್ತು ಗಂಡಬಿಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರಮಾಡಿದವನಾಗಿದ್ದಾನೆ" (5:32; ಒತ್ತಿ ಹೇಳಿದ್ದು ನನ್ನದು).

ಫರಿಸಾಯರು ಯೇಸುವಿಗೆ ಒಬ್ಬನು "ಯಾವದಾದರೂ ಒಂದು ಕಾರಣದಿಂದ" ತನ್ನ ಹೆಂಡತಿಯನ್ನು ಬಿಟ್ಟು ಬಿಡುವುದು ಧರ್ಮವೋ ಹೇಗೆ ಎಂದು ಕೇಳಿದನು (19:3). ಆತನ ಉತ್ತರವು ದೇವರ ಸೃಷ್ಠಿಯ ಆಧಾರದ ಮೇಲೆ ರಚನೆಗೊಂಡಂತೆ ಉತ್ತರವು "ಇಲ್ಲ!"

ಎನ್ನುವದೇ ಆಗಿತ್ತು. ನಂತರ, ಯೇಸು ತನ್ನ ಶಿಷ್ಯರಿಗೆ ಈ "ಅನೈತಿಕತೆ" ಸಾಮಾನ್ಯ ನಿಯಮಕ್ಕೆ ವಿನಾಯಿತಿಯಾಗಿದೆ ಎಂದು ಹೇಳಿದ್ದಾರೆ.[14] "ಅನೈತಿಕತೆ" ಎನ್ನುವ ಶಬ್ದವು ಗ್ರೀಕ್ ಭಾಷೆಯಲ್ಲಿ "ಮದುವೆಯಾಗದವರೊಂದಿಗೆ ಲೈಂಗಿಕ ಕ್ರಿಯೆ" (KJV) ಮತ್ತು "ದಾಂಪತ್ಯದಲ್ಲಿ ಅಪನಂಬಿಕೆ" ಎಂದು ಅನುವಾದಿಸಲಾಗಿದೆ (NIV) *porneia,* ಎನ್ನುವ ಶಬ್ದವು ಒಂದು ರೀತಿಯ ಅನೈತಿಕವಾದ ಲೈಂಗಿಕ ಕ್ರಿಯೆಯಲ್ಲಿ ಒಳಗೊಂಡಿರುವದನ್ನು ಈ ಶಬ್ದವು ಸೂಚಿಸುತ್ತದೆ. "ವ್ಯಭಿಚಾರ" (*moicheia*)ಕ್ಕಿಂತಲೂ ಈ ಕಾರ್ಯ ಬಹಳ ದೊಡ್ಡದೆಂದು ಬಿಂಬಿಸಲಾಗಿದೆ, ಮದುವೆಯಾಗಿರುವ ಜೋಡಿಗಳು ದಾಂಪತ್ಯದ ಸಾಮಾನ್ಯ ಕ್ರಿಯೆಗಿಂತಲೂ ಹೆಚ್ಚಿನ ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವದನ್ನು ಇದು ಸೂಚಿಸುತ್ತದೆ.[15]

ವಿನಾಯಿತಿ ವಾಕ್ಯ ಭಾಗವು ಪುರುಷರು ಅಪನಂಬಿಕೆಯುಳ್ಳ ತಮ್ಮ ಪತ್ನಿಯರಿಗೆ ವಿಚ್ಛೇದನ ಕೊಡಬಹುದೆಂದು ಹೇಳುತ್ತದೆ, ಅದನ್ನು ಮಾಡುವಂತೆ ಅವರಿಗೆ ಆಜ್ಞೆ ಕೊಟ್ಟಿರುವದಿಲ್ಲ (ಯೆಹೂದ್ಯ ಗುರುಗಳ ಸಂಪ್ರದಾಯ ಮಾಡಿದಂತೆ[16]). ಯಥಾರ್ಥವಾದ ಪಶ್ಚಾತ್ತಾಪ ಮತ್ತು ಕ್ಷಮಾಪಣೆಯಿಂದ ಮದುವೆಯ ಪುನಃ ಒಂದುಗೂಡಿಸಬಹುದಾಗಿದೆ.

## ಶಿಷ್ಯರ ಪ್ರತ್ಯುತ್ತರ (19:10-12)

**[10]ಅದಕ್ಕೆ ಶಿಷ್ಯರು - ಹೆಂಡತಿಯ ವಿಷಯವಾಗಿ ಗಂಡನ ಧರ್ಮ ಹೀಗಿದ್ದರೆ ಮದುವೆ ಯಾಗುವದು ಒಳ್ಳೇದಲ್ಲ ಅಂದಾಗ ಆತನು ಅವರಿಗೆ - [11]ಈ ಮಾತನ್ನು ಅಂಗೀಕರಿಸುವ ವರವನ್ನು ಹೊಂದಿದವರೇ ಹೊರತು ಮತ್ತಾರೂ ಅದನ್ನು ಅಂಗೀಕರಿಸುವದಿಲ್ಲ. [12]ತಾಯಿಯ ಗರ್ಭದಿಂದ ನಪುಂಸಕರಾಗಿ ಹುಟ್ಟಿದವರು ಕೆಲವರು ಇದ್ದಾರೆ; ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ; ಮತ್ತು ಪರಲೋಕ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗ ಮಾಡಿಕೊಂಡವರು ಕೆಲವರು ಇದ್ದಾರೆ. ಅಂಗೀಕರಿಸಬಲ್ಲವನು ಅಂಗೀಕರಿಸಲಿ ಎಂದು ಹೇಳಿದನು.**

**ವಚನ 10.** ಮನೆಯಲ್ಲಿ ಯೇಸು ಫರಿಸಾಯರೊಂದಿಗೆ ಚರ್ಚೆಮಾಡುವ ದೃಶ್ಯದಿಂದ **ಶಿಷ್ಯರೊಂದಿಗೆ** ಚರ್ಚಿಸುವ ದೃಷ್ಯಕ್ಕೆ ಇಲ್ಲಿ ಬದಲಾವಣೆಯಾಗಿದೆ (ಮಾರ್ಕ 10:10). ಆಲೋಚಿಸಿದ ಅಂಶವು ಅದೇ ಆಗಿದೆ. ಯೇಸು ತನ್ನ ಹಿಂಬಾಲಕರಿಗೆ ವಿಚ್ಛೇದನವು ಒಂದು ಕೊಡಲ್ಪಟ್ಟಿರುವ ಅವಕಾಶವಲ್ಲ ಎಂದು ಹೇಳುವದನ್ನು - ಮತ್ತು ಒಂದು ವಿನಾಯಿತಿ ಏನೆಂದರೆ ಮದುವೆ ಯಾಗದೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವದು, ಅಥವಾ ಅನೈತಿಕ ಲೈಂಗೀಕ ಕ್ರಿಯೆಯಲ್ಲಿ ತೊಡಗುವದು ಇದೆಲ್ಲವನ್ನು ಮದುವೆ ಸಂಗಾತಿಯೊಂದಿಗೆ ಮಾಡಬಾರದು ಎಂದು ಹೇಳುವದನ್ನು ಶಿಷ್ಯರು ಅರ್ಥಮಾಡಿಕೊಂಡರು. ಇದರಲ್ಲಿರುವ ಒಂದು ಕಷ್ಟಕರ ಸಂಗತಿ ಅರ್ಥಮಾಡಿಕೊಂಡು ಅವರು ಆತನಿಗೆ, **ಹೆಂಡತಿಯ ವಿಷಯವಾಗಿ ಗಂಡನ ಧರ್ಮ ಹೀಗಿದ್ದರೆ ಮದುವೆಯಾಗುವದು ಒಳ್ಳೇದಲ್ಲ** ಎಂದು ಹೇಳಿದರು. ಅವರ ಒಂದು ಆಲೋಚನೆ ಇದಾಗಿತ್ತು: "ಕೆಟ್ಟ ಮದುವೆ ಸಂಬಂಧದಿಂದ ಹೊರಬರಲು ಮರಣದ ಹೊರತು ಬೇರೆ ಅವಕಾಶ ಇಲ್ಲದೆ ಇದ್ದಲ್ಲಿ ಅದು ಒಬ್ಬಂಟಿಗರಾಗಿ ಉಳಿದುಕೊಳ್ಳುವದು ಉತ್ತಮವೆಂದು ಆಲೋಚಿಸಿದರು."

ಈ ಸಮಯದಲ್ಲಿ ಪ್ರಾಮುಖ್ಯತೆ ಕೊಟ್ಟಿರುವದು, ಶಿಷ್ಯರು ವಿಚ್ಛೇದನ ಕುರಿತು Hillel ರವರ ಸ್ವತಂತ್ರವಾದ ಅಂಶವನ್ನು ಹಂಚಿಕೊಳ್ಳಲು ಇಷ್ಟಪಡುವವರಾಗಿದ್ದಾರೆ. ಯಾವದಾದರು ಒಂದು ಕಾರಣಕ್ಕೆ ವಿಚ್ಛೇದನ ಕೊಡುವದಕ್ಕೆ ಅವಕಾಶವಿಲ್ಲ, ಆದರೆ ಕೆಲವು ಯೆಹೂದ್ಯರು ಪುರುಷರು ತಮ್ಮ ಕೆಟ್ಟ ಹೆಂಡತಿಯರಿಗೆ ವಿಚ್ಛೇದನ ಕೊಡುವ ಹಕ್ಕನ್ನು ಹೊಂದಿದ್ದಾರೆ ಎಂಬಂತೆ ಹೇಳುವವರಾಗಿದ್ದರು.[17]

**ವಚನ 11.** ಯೇಸು ತನ್ನ ಶಿಷ್ಯರಿಗೆ, **ಈ ಮಾತನ್ನು ಅಂಗೀಕರಿಸುವ ವರವನ್ನು ಹೊಂದಿದವರೇ ಹೊರತು ಮತ್ತಾರು ಅದನ್ನು ಅಂಗೀಕರಿಸುವದಿಲ್ಲ.** ಆತನ ಮಾತುಗಳು

ಎರಡು ದಿಕ್ಕಿನಲ್ಲಿ ಅರ್ಥಮಾಡಿಕೊಳ್ಳಲಾಗಿದೆ. ಒಂದು ಅಂಶ ಹೀಗೆ ಹೇಳುತ್ತದೆ. "ಈ ಹೇಳಿಕೆ" ಅಥವಾ "ಈ ಶಬ್ದ" (*logos*) ಎನ್ನುವದು ಯೇಸುವಿನ ಮಹತ್ವವುಳ್ಳ ಬೋಧನೆಯ ಹಿಂದಿನ ಭಾಗವು ಮದುವೆಯ ಕುರಿತು ಬೋಧಿಸುತ್ತದೆ ಎಂದು ಸೂಚಿಸುತ್ತದೆ (19:3-9). NJBಯಲ್ಲಿ ಇದರ ಕುರಿತು ಕುಲಂಕುಷವಾಗಿ ವಿವರಣೆ ಕೊಡುತ್ತದೆ: "ಆದರೆ ಆತನು ಪ್ರತ್ಯುತ್ತರವಾಗಿ, 'ನಾನು ಹೇಳಿದ್ದನ್ನು ಅಂಗೀಕರಿಸುವ ಪ್ರತಿಯೊಬ್ಬನು ಎಂಬುದಾಗಿ ಅಲ್ಲ, ಆದರೆ ಕೇವಲ ಅದು ಯಾರಿಗೆ ಕೊಡಲ್ಪಟ್ಟಿದೆ ಅವರಿಗೆ ಮಾತ್ರ.''' ಈ ವಿಷಯದಲ್ಲಿ, ಮದುವೆ ಎನ್ನುವದು ದೇವರಿಂದ ಬಂದಿರುವ ವರವಾಗಿದೆ ಎಂದು ಇದು ಹೇಳುತ್ತದೆ. ಅದನ್ನು ಯಾರು "ಅಂಗೀ ಕರಿಸುವದಿಲ್ಲವೋ" ಅವರು ಅವಿವಾಹಿತನಾಗಿಯೇ ಉಳಿಯುವನು (19:12).

ಇನ್ನೊಂದು ಅವಲೋಕನ ಹೇಳುವಂತೆ "ಈ ಮಾತನ್ನು" ಎಂಬುವುದು ಶಿಷ್ಯರು ಹೇಳಿರುವ ಮಾತು "ಮದುವೆಯಾಗದೆ ಇರುವದು ಒಳ್ಳೆಯದು" ಎನ್ನುವದನ್ನು ಸೂಚಿಸುತ್ತದೆ (19:10). ಈ ವಿಷಯದಲ್ಲಿ, ಯೇಸು ತನ್ನ ಶಿಷ್ಯರ ಮೂಲವಾದ ಒಂದು ಅಂತಿಮವಾದ ಹೇಳಿಕೆ - ಅದೇನೆಂದರೆ, ಕೆಲವರು ಮದುವೆಯಾಗದೆ ಇರುವದು ಒಳ್ಳೆಯದು ಎನ್ನುವದಕ್ಕೆ ಆತನು ಒಪ್ಪಿಕೊಳ್ಳುತ್ತಿದ್ದನು. ಹಾಗಿದ್ದರೂ, ಎಲ್ಲಾ ಜನರು ಬ್ರಹ್ಮಚರ್ಯವನ್ನು ಪಾಲಿಸಲು ಸಾಮರ್ಥ್ಯ ಹೊಂದಿರುವದಿಲ್ಲವೆಂದು ಆತನಿಗೆ ತಿಳಿದಿದೆ (ನೋಡಿರಿ 1 ಕೊರಿಂಥ 7:2). ಮದುವೆಯ ವಿಷಯಕ್ಕೆ ಸಂಬಂಧಿಸಿದಂತೆಯೇ ಪೌಲನು ಅದು "ದೇವರಿಂದ ಬಂದಿರುವ ವರ" ಎಂದು ಹೇಳಿದ್ದಾನೆ (1 ಕೊರಿಂಥ 7:7).

**ವಚನ 12.** ಜನರು ಯಾಕೆ ಮದುವೆ ಮಾಡಿಕೊಳ್ಳುವದಿಲ್ಲವೆಂದು ಹೇಳುವದಕ್ಕೆ ಯೇಸು ಮೂರು ಕಾರಣಗಳನ್ನು ಕೊಟ್ಟಿದ್ದಾನೆ. ಮೊದಲ ಮತ್ತು ಎರಡನೆಯ ಕಾರಣಗಳು ದೈಹಿಕ ಸ್ಥಿತಿಯನ್ನು ತೋರಿಸುತ್ತವೆ. ಅವುಗಳು ಮೂರನೆಯ ಕಾರಣಕ್ಕೆ ನಡಿಸುತ್ತವೆ, ಅದು ಆತ್ಮೀಕ ಆಯ್ಕೆಯಾಗಿದೆ. ಅಂತಿಮವಾದ ಆಯ್ಕೆ ಅದು ಈ ವಚನದ ಕೇಂದ್ರಬಿಂದುವಾಗಿದೆ.

ಮೊದಲನೆಯದಾಗಿ, ಕರ್ತನು ಹೇಳಿದ್ದೇನೆಂದರೆ, **ತಾಯಿಯ ಗರ್ಭದಿಂದ ನಪುಂಸಕ ರಾಗಿ ಹುಟ್ಟಿದವರು ಕೆಲವರು ಇದ್ದಾರೆ.** ಹುಟ್ಟಿನ ದೋಷಗಳು ಕೆಲವರನ್ನು ನಪುಂಸಕರನ್ನಾಗಿ ಮಾಡುತ್ತದೆ. ಯೆಹೂದ್ಯರ ಸಾಹಿತ್ಯವು ಅಂಥವರನ್ನು "ಸ್ವಾಭಾವಿಕವಾಗಿ ನಪುಂಸಕರಾ ದವರು" ಎಂದು ಹೇಳುತ್ತದೆ.[18] ಅಂತಿಮವಾಗಿ ಅವರು ಮದುವೆಯಾಗದೆ ಉಳಿಯುತ್ತಾರೆ ಅಂಥವರು ಯಾವುದೇ ಸಂಕಷ್ಟಗಳನ್ನು ಅಂದರೆ ಲೈಂಗಿಕದ ಅಗತ್ಯತೆ ಮತ್ತು ಆಸೆಗಳನ್ನು ಎದುರಿಸುವದಿಲ್ಲ.

ಎರಡನೆಯದಾಗಿ, ಯೇಸು ಹೇಳಿದ್ದು, **ಮನುಷ್ಯರಿಂದ ನಪುಂಸಕರಾಗಿ ಮಾಡಲ್ಪಟ್ಟವರು ಕೆಲವರು ಇದ್ದಾರೆ.** "ಮನುಷ್ಯರಿಂದ ಮಾಡಲ್ಪಟ್ಟ ನಪುಂಸಕರು" ಎನ್ನುವ ಭಾಗವು ಯೆಹೂದ್ಯರಲ್ಲಿ ಸಾಮಾನ್ಯವಾದ ಹೇಳಿಕೆಯಾಗಿತ್ತು.[19] ಇದನ್ನು ಪುರುಷರು ವಿರ್ಯಗುಂದಿಸುವದನ್ನು ಸೂಚಿಸುವಂಥದ್ದಾಗಿದೆ. ಇಂಥಹ ಆಚರಣೆ ಯೆಹೂದ್ಯರಿಗೆ ಇಷ್ಟವಿರಲಿಲ್ಲ,[20] ಯಾಕೆಂದರೆ ಧರ್ಮೋಪದೇಶವು ಇಂಥಹ ಪುರುಷರನ್ನು ದೇವರ ಸಭೆಯಲ್ಲಿ ಸೇರಿಸುತ್ತಿರಲಿಲ್ಲ (ಧರ್ಮೋಪದೇಶ ಕಾಂಡ 23:1) ಅಥವಾ ಯಜ್ಞವೇದಿಯ ಹತ್ತಿರದಲ್ಲಿ ಅಂಥವರು ಸೇವೆ ಮಾಡಲು ಬಿಡುತ್ತಿರಲಿಲ್ಲ (ಯಾಜಕಕಾಂಡ 21:20, 21). ಏನೇ ಆದರೂ, ಅನ್ಯರಲ್ಲಿ ಈ ವಿರ್ಯಗುಂದಿಸುವ ಕಾರ್ಯವು ಸಾಮಾನ್ಯವಾದ ಅಭ್ಯಾಸವಾಗಿತ್ತು. ಹಿಂದಿನ ಕಾಲದ ಪೂರ್ವದಲ್ಲಿ, ಕೈದಿಗಳಿಗೆ ಇದನ್ನು ಶಿಕ್ಷೆಯಾಗಿ ನೀಡುತ್ತಿದ್ದರು.[21] ಇದಕ್ಕೆ ಇನ್ನು ಸೇರಿಸಿ ಹೇಳುವುದಾದರೆ, ಕೆಲವು ವಿಗ್ರಹ ಆರಾಧನೆಯ ಅರ್ಚಕರು ಧಾರ್ಮಿಕ ಉದ್ದೇಶದಿಂದ ಅವರು ವಿರ್ಯಗುಂದಿಸಿಕೊಳ್ಳುತ್ತಿದ್ದರು.[22] ರಾಜನ ಅಂತಃಪುರದಲ್ಲಿ ಇರುವ ಪುರುಷರಿಗೆ ಅವರಿಂದ ಅಲ್ಲಿರುವ ಹೆಂಗಸರ ಮುಖಾಂತರ ಯಾವುದೇ ಮಕ್ಕಳು ಹುಟ್ಟಬಾರದು ಎನ್ನುವ ಉದ್ದೇಶದಿಂದ ಅಲ್ಲಿರುವ ಗಂಡಸರಿಗೆ ಪೂರ್ವಯೋಚಿತವಾಗಿ ನಪುಂಸಕರನ್ನಾಗಿ ಮಾಡುತ್ತಿದ್ದರು (ಎಸ್ತೇರಳು 2:14 ನೋಡಿರಿ). ಕೆಲವು ಆಡಳಿತಗಾರರು ಈ ನಪುಂಸಕರನ್ನು ದೊಡ್ಡ ಅಧಿಕಾರಿಗಳನ್ನಾಗಿ

ಮಾಡಿ ಸೇವೆ ತೆಗೆದುಕೊಂಡರು ಯಾಕೆಂದರೆ ಅವರು ವಿಧೇಯತೆಯುಳ್ಳವರು ಮತ್ತು ರಾಜ ನಿಷ್ಠೆಯುಳ್ಳವರು ಆಗಿದ್ದರು.[23]

ಉದಾಹರಣೆಗೆ ಇಂಥಹ ರಾಜನಿಷ್ಠೆಯಾಗಿದ್ದ ಅಧಿಕಾರಿಗಳನ್ನು ಹಳೆ ಮತ್ತು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ. ದಾನಿಯೇಲನು ಮತ್ತು ಆತನ ಮೂರು ಜನ ಸ್ನೇಹಿತರು ಬಾಬೇಲಿನ ಸೆರೆಗೆ ತೆಗೆದುಕೊಂಡು ಹೋದ ನಂತರ ಅವರನ್ನು ನಪುಂಸಕರನ್ನಾಗಿ ಮಾಡಿದರು ಎಂದು ಹೇಳಲಾಗುತ್ತದೆ. ಈ ಆಲೋಚನೆಗೆ ಪ್ರವಾದನೆಯು ಪುಷ್ಠಿ ನೀಡುತ್ತದೆ ಹೇಗೆಂದರೆ ರಾಜನಿಷ್ಠೆಯ ಸಂತಾನದವರು "ಬಾಬೆಲಿನ ರಾಜನ ಅರಮನೆಯಲ್ಲಿ ಕಂಚುಕಿಗಳನ್ನಾಗಿ (ನಪುಂಸಕರನ್ನಾಗಿ)" ಮಾಡಿ ಅವರನ್ನು ನೇಮಿಸಲಾಯಿತು (2 ಅರಸುಗಳು 20:18; ಯೆಶಾಯ 39:7; KJV). ನಿಜಾಂಶವೇನೆಂದರೆ ಈ ನಾಲ್ಕು ಜನರು "(ರಾಜನ) ನಪುಂಸಕರಿಗೆ ಗುರುಗಳಂತೆ ಇದ್ದರು" ಎಂದು ನಂಬಲಾಗಿದೆ (ದಾನಿಯೇಲ 1:3; KJV).[24] ಹೊಸ ಒಡಂಬಡಿಕೆಯಲ್ಲಿ ಫಿಲಿಪ್ಪನಿಂದ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ಐಥಿಯೋಪ್ಯ ದೇಶದ ಒಬ್ಬ ವ್ಯಕ್ತಿ ನಪುಂಸಕನಾಗಿದ್ದನು ಅವನು ರಾಣಿಯ ಆಸ್ಥಾನದಲ್ಲಿ ನಂಬಿಗಸ್ತನಾಗಿರುವ ಖಜಾಂಚಿಯಾಗಿ ಕೆಲಸ ಮಾಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 8:27).

ಮೂರನೆಯದಾಗಿ, ಕರ್ತನು ಹೇಳಿದ್ದು, **ಪರಲೋಕ ರಾಜ್ಯದ ನಿಮಿತ್ತವಾಗಿ ತಮ್ಮನ್ನು ತಾವೇ ನಪುಂಸಕರಾಗಿ ಮಾಡಿಕೊಂಡವರು ಕೆಲವರು ಇದ್ದಾರೆ.** ಈ ಕೊನೆಯ ಗುಂಪಿನವರು ಅಲಂಕಾರಿಕವಾಗಿ ಅರ್ಥಮಾಡಿಕೊಂಡಿದ್ದಾರೆ.[25] ಈ ಮನುಷ್ಯನು ಅವರಿಗೆ ಇಷ್ಟವಿರುವದಾದರೆ ಅವರು ಮದುವೆ ಮಾಡಿಕೊಳ್ಳಬಹುದು ಮತ್ತು ಮಕ್ಕಳನ್ನು ಮಾಡಬಹುದಾಗಿತ್ತು. ಏನೇ ಆದರೂ, ಅವರು ಪೌಲನು ಮಾಡಿದಂತೆ, ಅವರು ಮದುವೆ ಮಾಡಿಕೊಳ್ಳದೆ ಯಾವುದೇ ಭಯದ ಚಿಂತೆಯಿಲ್ಲದೆ, ಕುಟುಂಬದ ಜವಾಬ್ದಾರಿಗಳನ್ನು ತಮ್ಮ ಮೇಲೆ ಬರದೆ ಇದ್ದಾಗ ಅವರ ಸ್ವತಂತ್ರವಾಗಿ ಸೇವೆ ಮಾಡುವದನ್ನು ಆರಿಸಿಕೊಂಡರು (1 ಕೊರಿಂಥ 7:32-34).

ಯೇಸು ಈ ವಿಷಯವನ್ನು, "ಯಾರು ಇದನ್ನು ಅಂಗೀಕರಿಸಬಲ್ಲವನು ಅಂಗೀಕರಿಸಲಿ" ಎಂದು ಹೇಳಿ ಮುಕ್ತಾಯ ಮಾಡಿದನು. ಈ ಮಾತು "ಅಂಗೀಕರಿಸು" (*chōreō*) ಇದನ್ನು ವಚನ 11ರಿಂದ ಪುನರಾವರ್ತನೆಯಾಗಿದೆ. ಆತನ ಹೇಳಿಕೆಯು ಹಿಂದೆ ಆತನ ಮದುವೆಯ ಕುರಿತು ಹೇಳಿರುವ ಬೋಧನೆಯನ್ನು ಅಂಗೀಕರಿಸುವದಕ್ಕೆ ಸೂಚನೆಯಾಗಿರಬಹುದು. ಬ್ರಹ್ಮಚರ್ಯ ಜೀವಿತವನ್ನು ಅಂಗೀಕರಿಸುವದಕ್ಕೆ ಇದು ಸಹಜವಾಗಿ ಸೂಚಿಸುವಂಥದ್ದಾಗಿದೆ. ಈ ವಿಷಯದಲ್ಲಿ, ಯೇಸು ತನ್ನ ಹಿಂಬಾಲಕರಲ್ಲಿ ಕೆಲವರು ಮಾತ್ರ ಅವಿವಾಹಿತರಾಗಿ ಜೀವಿಸಬಹುದೆಂದು ಆತನು ಈಗಾಗಲೇ ತಿಳಿದುಕೊಂಡಿದ್ದನು.[26] ಕೊನೆಯದಾಗಿ, ಯೇಸು ತನ್ನ ಶಿಷ್ಯರಿಗೆ ಎರಡು ಆಯ್ಕೆಗಳನ್ನು ಬಿಟ್ಟನು: ವಿಚ್ಛೇದನವಿಲ್ಲದ ಮದುವೆ (ಅಪನಂಬಿಕೆಯ ಘಟನೆಗಳನ್ನು ಹೊರತುಪಡಿಸಿ) ಅಥವಾ ಅವಿವಾಹಿತರಾಗಿ ಇರುವ ಆಯ್ಕೆಗಳು.

### ಪಾಠಗಳು

## ಮದುವೆ ಕುರಿತು (19:3-12)

ವಿಚ್ಛೇದನ ಎನ್ನುವದು United Statesನಲ್ಲಿ ಸಾಂಕ್ರಾಮಿಕ ರೋಗದಂತೆ ಹಬ್ಬಿದೆ. ಒಂದು ಅಂಕಿ ಅಂಶವು ಪ್ರತಿಶತ 40ಕ್ಕಿಂತಲೂ ಹೆಚ್ಚಾಗಿ ಮದುವೆಗಳು ಬೇಕು ಬೇಕೆಂದು ಅಂತ್ಯಗೊಳ್ಳುತ್ತವೆ[27] ಎಂದು ಹೇಳುತ್ತದೆ. ವಿಚ್ಛೇದನವು ಗಾಯಮಾಡುವಂಥದ್ದು ಮತ್ತು ನೋವಿನಿಂದ ಕೂಡಿರುವಂಥದ್ದು ಆಗಿದೆ; ಇದು ಮದುವೆಯ ಮರಣವಾಗಿದೆ. ನಮ್ಮ ಮೂಲ ಪಠ್ಯವು ಮದುವೆಯ ಮಹತ್ವವುಳ್ಳ ವಿಷಯಗಳಾದ ವಿಚ್ಛೇದನ ಮತ್ತು ಮರು ಮದುವೆಯ ಕುರಿತು ಏನನ್ನು ಬೋಧಿಸುತ್ತದೆ?

*ಒಂದು ಗೊಂದಲದ ಸಂದರ್ಭ - ಎರಡು ವಿರೋಧಾತ್ಮಕ ಅಂಶಗಳು* (19:3). ಈ ಎರಡು ವಿರೋಧಾತ್ಮಕ ಅವಲೋಕನಗಳು ಯೇಸುವಿನ ಕಾಲದಲ್ಲಿ ಪ್ರಚಲಿತವಾಗಿದ್ದವು. Shammai ("ಸಂಪ್ರದಾಯ ಪಾಲನೆಯನ್ನು") ಧರ್ಮೋಪದೇಶಕಾಂಡದಲ್ಲಿ "ಅಶುದ್ಧ ಆಚಾರ" ವೆಂದು ಮಾಡಿಕೊಂಡು ಬರಲಾಗಿದೆ. ಧರ್ಮೋಪದೇಶಕಾಂಡ 24:1-4ರಲ್ಲಿ ಕೇವಲ ವ್ಯಭಿಚಾರವೆಂದು ಹೇಳಲಾಗಿದೆ. Hillel ("ಸ್ವಾತಂತ್ರ್ಯ"); ಅವರು ಹೇಳಿದ್ದೇನೆಂದರೆ ಅಶುದ್ಧಾಚಾರ ವಿಚ್ಛೇದನವನ್ನು ಪ್ರತಿಪಾದಿಸುತ್ತದೆ. ಅದರಿಂದ ಗಂಡನಿಗೆ ಮನನೋಯಿಸುವ ಕಾರ್ಯ ಇದರಿಂದ ಆಗಬಹುದು.

ಯೇಸುವಿಗೆ ಪ್ರಶ್ನಿಸಿದ ಫರಿಸಾಯರ ಹೋರಾಟದ ಆಲೋಚನೆಗಳು ಇವುಗಳಾಗಿದ್ದವು. ಸತ್ಯವನ್ನು ಕಂಡುಹಿಡಿಯುವದು ಅವರ ಮುಖ್ಯ ಉದ್ದೇಶವಾಗಿರಲಿಲ್ಲ; ಯೇಸುವನ್ನು ಅವರು ತಪ್ಪಿನಲ್ಲಿ ಸಿಕ್ಕಿಸಬೇಕಾಗಿತ್ತು. ಚರ್ಚೆಯಲ್ಲಿ ಆತನು ವಿಷಯವನ್ನು ಬಿಟ್ಟು ಹೋಗದೆ ಅವರಿಗೆ ಆಶ್ಚರ್ಯವನ್ನು ಉಂಟುಮಾಡಿದನು.

*ರಕ್ಷಕನಿಂದ ಸರಿಪಡಿಸುವಿಕೆ - "ಸೃಷ್ಟಿಕರ್ತನ ಕಡೆಗೆ ಹಿಂತಿರುಗಿದನು"* (19:4-6). ಯೇಸು ವಿಚ್ಛೇದನವನ್ನು ಸ್ವತಂತ್ರವನ್ನಾಗಿಯಾಗಲಿ ಅಥವಾ ಸರಳವನ್ನಾಗಿ ಮಾಡಲು ಪ್ರಯತ್ನಿಸಲಿಲ್ಲ. ಆತನು ವಿಚ್ಛೇದನವನ್ನು ವಾದಿಸಲಿಲ್ಲ, ಮತ್ತು ಆತನು ಅದರ ಕುರಿತಾಗಿ ನಿರ್ದಿಷ್ಟವಾಗಿ ಆಜ್ಞೆ ಮಾಡಲಿಲ್ಲ. ಈ ವಿಷಯಗಳ ಮೇಲೆ ಆತನು ಪ್ರಸಿದ್ಧವಾದ ಆತನ ಬೋಧನೆಯನ್ನು ಕಲಿಸುವದಾಗಲಿ ಇಲ್ಲವೆ ಈ ಉದ್ದೇಶಕ್ಕಾಗಿ ಮೋಶೆಯನ್ನು ಬಳಸಿಕೊಳ್ಳುವ ಕಾರ್ಯವಾಗಲಿ ಆತನು ಮಾಡಲಿಲ್ಲ. ಅದರ ಬದಲಾಗಿ, ಆತನು ಆದಿಕಾಂಡದಲ್ಲಿರುವ ದೇವರ ಮೂಲ ಕಟ್ಟಳೆಗೆ ಹಿಂದಕ್ಕೆ ಹೋದನು.

ಒಬ್ಬ ಪುರುಷನಿಗೆ ಒಬ್ಬಳೆ ಸ್ತ್ರೀಯೆಂದು ದೇವರು ಮಾಡಿರುವ ಕಲ್ಪನೆ ಇದರಲ್ಲಿ ಒಳಗೊಂಡಿದೆ (ಆದಿಕಾಂಡ 2:21-25). ಇದರಲ್ಲಿ ಬಹುಪತ್ನಿತ್ವ, ಬಹುಪತಿಪದ್ಧತಿ, ಮತ್ತು ಒಂದೇ ಲಿಂಗದವರೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವದು ಒಳಗೊಂಡಿರುತ್ತದೆ (ರೋಮಾಪುರ 1:26, 27). ಜನರು ಯಾವಾಗ ದೇವರ ವ್ಯವಸ್ಥೆಯಿಂದ ದೂರ ಹೋಗುವರೋ ಆಗ ಅವರಲ್ಲಿ ಕೇವಲ ಪಾಪ ಮತ್ತು ಅಸಂತೋಷ ಅವರನ್ನು ಹಿಂಬಾಲಿಸುವವು.

*ಗೊಂದಲದ ದೃಶ್ಯ ವಿವರಣೆ - "ಮೋಶೆ ವಿಚ್ಛೇದನಕ್ಕೆ ಅನುಮತಿ ಕೊಟ್ಟನು"* (19:7-9). ಯೆಹೂದ್ಯರು ತಮ್ಮ ಚರ್ಚೆಯಲ್ಲಿ ಮೋಶೆಯನ್ನು ದೇವರ ವಿರುದ್ಧವಾಗಿದ್ದಾನೆಂದು ಚಿತ್ರಿಸಲು ಪ್ರಯತ್ನಿಸಿದರು. ಮೋಶೆ ಮದುವೆಯ ಕುರಿತು ಕೊಟ್ಟಿರುವ ಕಟ್ಟಳೆಯನ್ನು ಮದುವೆಯ ಪರಿಶುದ್ಧತೆಯನ್ನು ಕಾಪಾಡುವದಕ್ಕಾಗಿ ಅಲ್ಲ, ಆದರೆ ಮದುವೆಯನ್ನು ಮುರಿದು ಹಾಕಲು ಕೊಟ್ಟಿರುವ ಅನುಮತಿ ಎಂದು ಹೇಳಲು ಉಪಯೋಗಿಸುತ್ತಿದ್ದರು.

"ಯಾಕೆ ಮೋಶೆಯು ಹೆಂಡತಿಗೆ ತ್ಯಾಗಪತ್ರವನ್ನು ಕೊಡಲು ಆಜ್ಞೆ ಮಾಡಿದನು?" ಎಂದು ಅವರು ಕೇಳಿದರು. ಇದು ಇಂದಿಗೂ ಒಳ್ಳೆಯ ಪ್ರಶ್ನೆಯಾಗಿಯೇ ಉಳಿದು ಕೊಂಡಿದೆ. ಯೇಸುವಿನ ಉತ್ತರ, "ಯಾಕೆಂದರೆ ನಿಮ್ಮ ಮೊಂಡತನವನ್ನು" ನೋಡಿ ಹಾಗೆ ಮಾಡಿದನು ಎಂದು ಹೇಳಿದನು. ನಿಜವಾಗಿಯೂ, ಮೋಶೆ ವಿಚ್ಛೇದನಕ್ಕೆ ಅಪ್ಪಣೆ ಕೊಡಲಿಲ್ಲ; ಆತನು ಪ್ರಸ್ತುತದಲ್ಲಿರುವ ಮದುವೆಯ ಬಂದನವನ್ನು ಕಾಪಾಡುವದಕ್ಕಾಗಿ ಅದನ್ನು ನಿಯಂತ್ರಣದಲ್ಲಿಡುವುದಕ್ಕಾಗಿ ಆತನು ಆ ರೀತಿಯಾಗಿ ಹೇಳಿದನು.

ಅವರು ಯೇಸುವಿಗೆ ಒಬ್ಬನು ಯಾವುದಾದರೂ, ಒಂದು ಕಾರಣದಿಂದ ತನ್ನ ಹೆಂಡತಿಯನ್ನು ಬಿಟ್ಟು ಬಿಡುವದು ಧರ್ಮವೋ ಹೇಗೆ? ಎಂದು ಕೇಳಿದರು. ಆತನು ಅವರಿಗೆ ಕೇವಲ ಹೆಂಡತಿಯ "ಹಾದರದ" ಕಾರಣದಿಂದ (ಲೈಂಗಿಕ ಅಪನಂಬಿಕೆ) ಮಾತ್ರ ಕೊಡಬಹುದು ಎಂದು ಉತ್ತರಿಸಿದನು. ಯೇಸು ಸ್ವತಃ ಆತನು ಮದುವೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾನೆ. ಸಂಗಾತಿಯ ಲೈಂಗಿಕ ಅಪನಂಬಿಕೆಯಾದಾಗ ವಿಚ್ಛೇದನಕ್ಕೆ

ಅವಕಾಶವಿದೆ ಎಂದು ಆತನು ಹೇಳಿದ್ದಾನೆ.

*ಕಠಿಣವಾದ ಪರಿಸ್ಥಿತಿ - "ಮದುವೆಯಾಗುವದು ಒಳ್ಳೇದಲ್ಲ"* (19:10-12). ಈ ವಿಷಯದ ಮೇಲೆ ಕರ್ತನ ಬೋಧನೆ ಕಠಿಣವಾಗಿದೆ ಎಂದು ಶಿಷ್ಯರು ಅಂದುಕೊಂಡರು. ಇಂದು ಅನೇಕರು ಈ ಅಂಶವನ್ನು ಹಂಚಿಕೊಳ್ಳುತ್ತಾರೆ. ಮದುವೆಯಲ್ಲಿ ಪ್ರವೇಶಿಸಿ ಅದನ್ನು ಮುಕ್ತಾಯ ಮಾಡುವುದು ಕಷ್ಟಕರವಾಗಿದೆ, ಬಹುಶಃ ಮದುವೆಯಾಗದ ಹಾಗೆಯೇ ಉಳಿದುಕೊಳ್ಳುವದು ಒಳ್ಳೆದು ಎಂದು ಶಿಷ್ಯರು ಕಂಡುಕೊಂಡಿರಬಹುದು.

ಆತನ ಈ ಸಲಹೆಗೆ ಅವರು ಅರ್ಥಮಾಡಿಕೊಂಡಿರುವದಕ್ಕೆ ಯೇಸು ಅದಕ್ಕೆ ಸಮ್ಮತಿಸಿದನು. ಇದು ಹೇಳುವದು ಕಷ್ಟಕರವಾಗಿದೆ ಮತ್ತು ಇದನ್ನು ಎಲ್ಲರು ಸ್ವೀಕರಿಸುತ್ತಾರೆ ಅಥವಾ ಅದರಂತೆ ಜೀವಿಸುತ್ತಾರೆ ಎಂದು ಹೇಳುವುದು ಕಷ್ಟಕರವಾದ ಸಂಗತಿ ಎಂದು ಆತನು ತಿಳಿದುಕೊಂಡಿದ್ದನು. ಒಬ್ಬನು ರಾಜ್ಯದ ನಿಮಿತ್ತವಾಗಿ "ನಪುಂಸಕ" ನಾಗುವದು (ಬ್ರಹ್ಮಚರ್ಯನಾಗಿ) ಮದುವೆಯ ಪರಿಶುದ್ಧತೆ ಕಾಪಾಡುವುದು ಒಳ್ಳೆಯದು ಎಂದು ಹೇಳುತ್ತಾ ಆತನು ಈ ವಿಷಯದ ಮುಕ್ತಾಯಕ್ಕೆ ಬರುತ್ತಾನೆ.

## ವಿಚ್ಛೇದನ: ಒಂದು ಸಾಂಕ್ರಮಿಕ ರೋಗವಿದ್ದಂತೆ (19:3-12)

ಮದುವೆಗಳು ಯಾಕೆ ಮುರಿದು ಬೀಳುತ್ತವೆ? ಅದಕ್ಕೆ ಸಂಬಂಧಿಸಿದಂತೆ ನಾಲ್ಕು ಕಾರಣಗಳನ್ನು ಇಲ್ಲಿ ಕೊಡಲ್ಪಟ್ಟಿವೆ.

1. *ಮದುವೆ ದೇವರಿಂದ ಪರಿಗಣಿಸಲಾಗಿಲ್ಲ, ಆದರೆ ಇದು ಸಂಪೂರ್ಣವಾಗಿ ಮಾನವನ ವ್ಯವಸ್ಥೆ ಇದಾಗಿದೆ.* ದೇವರು ಮದುವೆಯನ್ನು ಅಭಿಷೇಕಿಸಿದ್ದಾನೆ ಎನ್ನುವ ಸಂಗತಿ ನಮ್ಮ ಸಮಾಜವು ತಿಳಿದುಕೊಳ್ಳಬೇಕು. ಮನೆ ಮತ್ತು ಕುಟುಂಬ ದೈವಿಕ ಕಟ್ಟಳೆಯಿಂದ ಸ್ಥಾಪಿಸಲ್ಪಟ್ಟಿದೆ (ಆದಿಕಾಂಡ 1:27, 28; 2:18-24). ಜೀವನದುದ್ದಕ್ಕೂ ಕಟ್ಟುಪಾಡಿನೊಂದಿಗೆ ಜೀವಿಸಬೇಕೆಂದು ಮೊದಲಿನ ದಂಪತಿಗೆ ದೇವರು ಜೋಡಿಸಿದನು ಮತ್ತು ಆ ಸಂಬಂಧವನ್ನು ಮುರಿಯಲು ಅದು ಒಂದೇ ಕಾರಣವನ್ನು ಕೊಡಬಹುದೆಂದು ಯೇಸು ಹೇಳಿದ್ದಾನೆ.

ಮದುವೆಯ ಮೇಲೆ ದೇವರಿಗೆ ಅಧಿಕಾರವಿಲ್ಲವೆಂದು ಜನರು ಹೇಳಬಹುದು ಆ ರೀತಿಯಾಗಿ ಆಲೋಚಿಸಬಹುದು. ಅನೇಕ ದಂಪತಿಗಳು ಮದುವೆಯ ಪ್ರಮಾಣ ಪತ್ರದ ಲಾಭ ಹೊಂದದೆ ಜೊತೆಯಾಗಿಯೇ ಇರುವರು. ಇನ್ನು ಇತರರು ಆ ಸ್ಥಳದ ಕಾನೂನಿನಂತೆ ಇರಬಹುದು ಆದರೆ ಅಲ್ಲಿ ಯಾವುದೇ ದೊಡ್ಡ ಅಧಿಕಾರ ಇರುವದಿಲ್ಲ ಎಂದು ಗುರುತಿಸಲಾಗಿದೆ. ಏನೇ ಆದರೂ, ದೇವರ ನಿಯಮಗಳು ಅಧಿಕಾರದಿಂದ ಕೂಡಿವೆ, ಮತ್ತು ಅವುಗಳು ಮಾನವನ ಒಳತಿಗಾಗಿ ಇರುತ್ತವೆ.

2. *ಮದುವೆ ಎನ್ನುವುದು ಜೀವನ ಪೂರ್ತಿಯಾಗಿ ಇರಬೇಕೆನ್ನುವ ಒಪ್ಪಂದವಲ್ಲ ಆದರೆ ಜೊತೆಯಾಗಿ ಇರುವವರೆಗೆ ಎನ್ನುವ ಒಪ್ಪಂದಂತೆಯೇ ಇರುತ್ತದೆ.* ದಂಪತಿಗಳು ಕೆಲವು ಸಾರಿ ಮದುವೆಯ ಪ್ರತಿಜ್ಞೆ ಬಹಳ ಹಗುರವಾಗಿ ತೆಗೆದುಕೊಳ್ಳುತ್ತಾರೆ. ಇದನ್ನು ಅವಿಶ್ವಾಸಿಗಳಿಂದ ನಿರೀಕ್ಷಿಸಬಹುದೇ ಹೊರತು ಕ್ರೈಸ್ತರಿಂದ ಅಲ್ಲ.

ಅಲಕ್ಷ್ಯತನ, ಅದರಿಂದಾಗಿ, ಮದುವೆ ಬಿದ್ದು ಹೋಗುವದಕ್ಕೆ ಪ್ರಮುಖ ಕಾರಣವಾಗಿದೆ. ಮದುವೆಗಾಗಿ ದೇವರು ಮಾಡಿರುವ ಯೋಜನೆಯನ್ನು ಯಾರು ಕಲಿಸುವುದಿಲ್ಲವೋ ಅವರು ವಿಚ್ಛೇದನ ಮತ್ತು ಮರುಮದುವೆ ಸಮಾಜದಲ್ಲಿ ಪ್ರಚಲಿತವಾಗಿವೆ ಎನ್ನುವ ತಪ್ಪು ಕಲ್ಪನೆ ಅವರು ಗುರುತಿಸುವದಿಲ್ಲ ತಿಳಿದುಕೊಳ್ಳುವದಿಲ್ಲ. ದೇವರ ನಿಯಮವು ಪ್ರಭುತ್ವ ಹೊಂದಿಕೊಂಡಿದೆ ಎಂದು ಜನರು ಕಲಿತುಕೊಂಡಿರಬೇಕು. ಮನುಷ್ಯರು ಅನುಮತಿಸಿದ್ದೆಲ್ಲವನ್ನು ದೇವರು ಒಪ್ಪುವದಿಲ್ಲ. ನಾವು ನೆಲದ ನಿಯಮಗಳಿಗೆ ಬದ್ಧರಾಗಿರಬೇಕು (ರೋಮಾಪುರ 13:1, 2), ಆದರೆ ಅವುಗಳು ದೇವರ ನಿಯಮಗಳೊಡನೆ ಸಂಘರ್ಷಮಾಡುವಂಥವುಗಳು ಆಗಿರಬಾರದು.

3. *ಮದುವೆ ಸಾಮಾನ್ಯವಾದ ಆತ್ಮೀಕ ಬಂದನವಿರುವದಿಲ್ಲ.* "ಕಲಬೆರೆಕೆ" ಮದುವೆಗಳು

ಇಸ್ರಾಯೇಲಗೆ ಅಂಟುರೋಗವಿದ್ದಂತೆ (ಎಜ್ರನು 9; 10; ನೆಹಮೀಯ 13:23-27). ಕಲಬೆರೆಕೆ ಜನಾಂಗದ ಸಮಸ್ಯೆಯಲ್ಲ, ಆದರೆ ಕಲಬೆರೆಕೆಯಾದ ಜಾತಿಗಳ ಸಮಸ್ಯೆಯಾಗಿದೆ. ಒಬ್ಬ ಕ್ರೈಸ್ತನು ಇತರೆ ನಂಬಿಕೆ ಹೊಂದಿಕೊಂಡಿರುವ ಆತನೊಂದಿಗೆ ಅಥವಾ ಅವಳೊಂದಿಗೆ ಮದುವೆ ಯಾಗುವಾಗ ಅವರು ನಾಶನ ಹೊಂದುವದಕ್ಕಾಗಿ ಸೂತ್ರವನ್ನು ಸಿದ್ಧಮಾಡಿಕೊಂಡಂತೆ ಆಗುತ್ತದೆ. ಯಶಸ್ವಿಯಾಗಿರುವ ಕಥೆಗಳು ಬಹಳ ಕಡಿಮೆ ಸಂಖ್ಯೆಯಲ್ಲಿರುತ್ತವೆ.

ಯಾರಾರು ಅವಿಶ್ವಾಸಿಗಳನ್ನು ನಂಬಿಗಸ್ತ ಕ್ರೈಸ್ತ ಸಂಗಾತಿಯನ್ನಾಗಿ ನಾನು ಬದಲಾವಣೆ ಮಾಡುತ್ತೇನೆ ಎನ್ನುವವರು ಮದುವೆಯ ಮುಂಚೆ ಮಾಡಲಿ. ತರುವಾಯ ಅವನು ಅಥವಾ ಅವಳು ಅಧಿಕೃತವಾಗಿ ಮದುವೆ ಪ್ರವೇಶಿಸಲು ನಿಜವಾಗಿಯೂ ಅವರು ಬದಲಾವಣೆ ಹೊಂದುವವರೆಗೆ ದೀರ್ಘಕಾಲ ಕಾಯಬೇಕಾಗುತ್ತದೆ.

4. *ಮದುವೆಯಲ್ಲಿ ನಿಜವಾದ ಪ್ರೀತಿ ಒಳಗೊಂಡಿರುವದಿಲ್ಲ.* ಎಲ್ಲಾ ಮದುವೆಗಳು ದೈವಿಕ ಪ್ರೀತಿಗೆ ಅನುಗುಣವಾಗಿರುವದಿಲ್ಲ. ಕೆಲವು ಮದುವೆಗಳು ಕೇವಲ ದೈಹಿಕ ಆಕರ್ಷಣೆ ಮಾತ್ರ ಒಳಗೊಂಡಿರುತ್ತವೆ. ಇತರ ಮದುವೆಗಳು ಹಣದ ಭದ್ರತೆ ಅಥವಾ ಸಮಾಜದಲ್ಲಿ ಘನತೆಯ ಆಧಾರದ ಮೇಲೆ ನಡೆಯುತ್ತವೆ. ಹಗೆ ತನಕ್ಕಾಗಿ ಜನರು ಮದುವೆ ಮಾಡಿಕೊಂಡಾಗ್ಯು, ಅದರ ಅಂತ್ಯವು ತಮ್ಮನ್ನು ತಾವೇ ನೋಯಿಸಿಕೊಳ್ಳುವ ಮುಖಾಂತರ ಅದನ್ನು ಅಂತ್ಯಗೊಳಿಸುತ್ತಾರೆ.

ದಂಪತಿಗಳು ಯಥಾರ್ಥವಾಗಿ ಒಬ್ಬರಿಗೊಬ್ಬರು ಪ್ರೀತಿಸಿಕೊಳ್ಳುವುದಾದರೆ, ಯಾವುದೇ ಸಮಸ್ಯೆ ಪರಿಹರಿಸಿಕೊಳ್ಳಬಹುದು. ತಪ್ಪುಗಳನ್ನು ಕ್ಷಮಿಸಬಹುದು, ಮತ್ತು ಸ್ವಾರ್ಥವನ್ನು ಬದಿಗೆ ಇಡಬಹುದು (ಎಫೆಸ 5:22, 23, 28, 29).

ಒಂದು ಸಾಮಾನ್ಯವಾದ ಕೊರತೆಯಾವುದೆಂದರೆ ಸಿದ್ಧತೆಯ ಕೊರತೆಯಾಗಿದೆ. ಕೆಲವು ದಂಪತಿಗಳು, ನಿರ್ದಿಷ್ಟವಾಗಿ ಚಿಕ್ಕವರಾಗಿರುತ್ತಾರೆ, ಯಾವುದೇ ಗಂಭೀರವಾದ ಆಲೋಚನೆ ಇಲ್ಲದೆ ಮತ್ತು ಸಿದ್ಧತೆ ಇಲ್ಲದೆ ಮದುವೆ ಮಾಡಿಕೊಳ್ಳುತ್ತಾರೆ. ಕೆಲವು ಸಾಹಸಪಡುವವರು ಆ ದಾರಿಯಲ್ಲಿ ಯಶಸ್ವಿಯಾಗಿರಬಹುದು. ಯಶಸ್ವಿಯಾದ ಮದುವೆಯಾಗಬೇಕಾದರೆ, ದೈಹಿಕವಾಗಿ, ಭಾವನ್ಮಾತಕವಾಗಿ, ನೈತಿಕವಾಗಿ, ಹಣಕಾಸಿನ ವ್ಯವಸ್ಥೆಯಲ್ಲಿ ಮತ್ತು ಆತ್ಮೀಕವಾಗಿ ಸಿದ್ಧತೆಯಾಗಬೇಕಾಗುತ್ತದೆ. ಮದುವೆಯ ಮುಂಚೆ ಇವೆಲ್ಲವನ್ನು ತಿಳಿದುಕೊಳ್ಳುವದರಿಂದ ಮದುವೆಗಳು ಯಾಕೆ ಮುರಿದು ಬೀಳುತ್ತವೆ ಎಂದು ತಿಳಿದುಕೊಂಡಾಗ ದಂಪತಿಗಳು ಇಂಥಹ ಅಪಾಯದ ಗುಂಡಿಗಳಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದಂತೆ ಆಗುತ್ತದೆ ಆಗ ಅವರು ಮದುವೆ ಸಂಬಂಧ ದೀರ್ಘವಾಗಿ ಮತ್ತು ಸಂತೋಷವಾಗಿ ಕೊನೆಗಾಣಿಸಬಹುದು.

## ನಿಯಂತ್ರಣದ ಒಂದು ಪ್ರೋತ್ಸಾಹ (19:3-12)

ಅನೇಕ ಸಾರಿ, ಸಮಸ್ಯೆಯನ್ನು ಹಿಡಿದಿಡಲು ತಪ್ಪಾದ ಸ್ಥಳದಿಂದ ನಾವು ಪ್ರಾರಂಭ ಮಾಡುತ್ತೇವೆ. ನಮ್ಮ ಪ್ರಯತ್ನಗಳು ಕುದುರೆ ಉಗ್ರಾಣದಿಂದ ಓಡಿಹೋಗಿರುವದನ್ನು ಹಿಡಿಯಲು ಪ್ರಯತ್ನಿಸಿದಂತೆ ಇದೆ. ಕುದುರೆ ಹೊರಗಡೆ ಹೋಗುವ ಮೊದಲೆ ಬಾಗಿಲನ್ನು ಮುಚ್ಚುವ ಪ್ರಜ್ಞೆಯ ಕಾರ್ಯ ಮಾಡಬಹುದೋ? ಅದರಂತೆಯೇ, ವಿಚ್ಛೇದನವನ್ನು ಎದುರಿಸುತ್ತಿರುವ ದಂಪತಿಗಳಿಗೆ ಹೆಚ್ಚಿನ ಪ್ರಜ್ಞೆಯುಳ್ಳ ತಿಳುವಳಿಕೆಯನ್ನು ಕೊಟ್ಟು ಕುಟುಂಬ ಸಂಬಂಧಗಳನ್ನು ಬಲಪಡಿಸಬೇಕಾಗಿದೆ. ಎಲ್ಲಾ ಸಭೆಯ ಹಿರಿಯರು ಬುದ್ಧಿಯುಳ್ಳವರಾಗಿ ಜನರಿಗೆ ಹೇಗೆ ಬಲವಾದ ಮದುವೆಗಳನ್ನು ಮತ್ತು ಕುಟುಂಬಗಳನ್ನು ಕಟ್ಟಬೇಕೆಂದು ಶಿಕ್ಷಣಕೊಡುವದಕ್ಕೆ ಪ್ರಯತ್ನಿಸಬೇಕು. ಅವರು ಕ್ರಮಾನುಸಾರವಾಗಿ ಕ್ರೈಸ್ತ ದಂಪತಿಗಳಿಗೆ ಮದುವೆಯು ಸಮೃದ್ಧ ಗೊಳಿಸುವ ಚರ್ಚಾಕೂಟಗಳು ಮತ್ತು ತರಗತಿಗಳನ್ನು ಏರ್ಪಡಿಸಬೇಕು. ಬೋಧಕರು ಯೌವನಸ್ಥರಿಗೆ ಮದುವೆಯ ಶುದ್ಧತೆ ಮತ್ತು ಗಂಡನ ಪಾತ್ರ ಮತ್ತು ಹೆಂಡತಿಯ ಪಾತ್ರದ ಕುರಿತು ಸಲಹೆ ಸೂಚನೆ ಕೊಡಬೇಕು. ಅವರು ದೈವಿಕವಾಗಿ ಒಂದಾಗಿ ಸೇರಿ ಬದುಕುವದನ್ನು

ಮತ್ತು ಜೊತೆಗಾರರಲ್ಲಿ ಏನನ್ನು ನೋಡಬೇಕು ಎನ್ನುವ ಸಂಗತಿಗಳನ್ನು ಕಲಿಸಬೇಕು. ಮದುವೆಯ ಕಾರ್ಯನಡೆಸುವ ಸೇವಕರು ಮದುವೆಯಾಗುವ ದಂಪತಿಗಳಿಗೆ ಮದುವೆಯ ಮುಂಚೆ ತಿಳುವಳಿಕೆ ಕೊಡುವ ಕೆಲಸ ಮಾಡಬೇಕು. ಸೇವಕರು ಸಹ ಕೆಲವು ಸಾರಿ ಮದುವೆ ಮತ್ತು ಕುಟುಂಬದ ವಿಷಯದ ಕುರಿತಾಗಿ ಅವರು ಪ್ರಸಂಗಗಳನ್ನು ಮಾಡುತ್ತಿರಬೇಕು.

---

ಟಿಪ್ಪಣಿಗಳು

[1]ಈ ಅವಧಿಯಲ್ಲಿ ಮತ್ತಾಯನಿಗಿಂತಲೂ ಹೆಚ್ಚಾಗಿ ಲೂಕನು ಹೆಚ್ಚಿನ ಮಾಹಿತಿಗಳನ್ನು ಕಲೆ ಹಾಕಿದ್ದಾನೆ (ನೋಡಿರಿ ಲೂಕ 13:22-18:34). ಹೆಚ್ಚಿನ ಕಥೆಗಳು ಅಸಾಧಾರಣವಾಗಿದೆ. ಲೂಕನು ಬಹುಶಃ ಪೆರಿಯಾದಿಂದ ತೆಗೆದುಕೊಳ್ಳುವದಕ್ಕಿಂತಲೂ ಗಲಿಲಾಯ ಮತ್ತು ಸಮಾರ್ಯದಿಂದ ಕಥೆಗಳು ತೆಗೆದುಕೊಳ್ಳಲಾಗಿದೆ (ಲೂಕ 13:22; 17:11). [2]Josephus *Antiquities* 17.8.1; Wars 3.3.3. [3]Mishnah *Yebamoth* 14.1. [4]Mishnah *Arakhin* 5.6; *Nedarim* 11.12. [5]Josephus *Antiquities* 15.7.10. [6]Ibid., 18.5.4. [7]Ibid., 4.8.23. Josephus ಅವರು ತನ್ನ ಮೂರನೆ ಹೆಂಡತಿಗೆ ವಿಚ್ಛೇದನ ಕೊಟ್ಟನು ಯಾಕೆಂದರೆ "ಆತನು ಆಕೆಯ ನಡವಳಿಕೆಯನ್ನು ಮೆಚ್ಚಲಿಲ್ಲ" (Josephus *Life* 76). [8]Mishnah *Gittin* 9.10. ನಂತರ, ಯೆಹೂದ್ಯ ಗುರು Rabbi Akiba ಹೀಗೆ ಹೇಳಿದನು, "ಅವನು ಆಕೆಗಿಂತಲೂ ಅಂದವಾಗಿರುವ ಕೆಲವರನ್ನು ಕಂಡುಕೊಂಡಿದ್ದರೆ" ಎನ್ನುವದನ್ನು ಹೇಳಿದ್ದಾನೆ. ಇದನ್ನು ಆದರಿಸಿ ಆ ಭಾಗವನ್ನು ಆತನು "ಅವಳಲ್ಲಿ ಏನೋ ಅವಲಕ್ಷಣವನ್ನು ಕಂಡನು" (ಧರ್ಮೋಪದೇಶ ಕಾಂಡ 24:1) ಎಂದು ಬರೆದಿದೆ. [9]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 480–81. [10]At Qumran, ಆದಿಕಾಂಡ 1:27 ಬಹು ಪತ್ನಿತ್ವವು ವಿರೋಧಿಸುವದನ್ನು ಇಲ್ಲಿ ತೆಗೆದುಕೊಳ್ಳಲಾಗಿದೆ. (*Damascus Rule* 4.205.2.) ಏನೇ -ಆದರೂ, ಯೆಹೂದ್ಯ ಮತದಲ್ಲಿ ಬಹುಪತ್ನಿತ್ವಕ್ಕೆ ಅವಕಾಶ ನೀಡಿದೆ. ಸಾಮಾನ್ಯ ಮನುಷ್ಯನು ನಾಲ್ಕು ಅಥವಾ ಐದು ಜನ ಹೆಂಡತಿಯರಿದ್ದರೆ, ರಾಜನು ಹದಿನೆಂಟು ಜನರನ್ನು ಹೊಂದಿಕೊಂಡು ಇರುತ್ತಿದ್ದನು. (Mishnah Sanhedrin 2.4; Ketuboth 10.1–6; Kerithoth 3.7.)

[11]John Chrysostom *Homilies on Matthew* 62.1. [12]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 280. [13]Michael J. Wilkins ರವರು ಧರ್ಮೋಪದೇಶಕಾಂಡ 24:1-4ರಲ್ಲಿ ಮೋಶೆಯ ಕಟ್ಟಳೆ ಗಳಿಗೆ ಮೂರು ಉದ್ದೇಶಗಳನ್ನು ಕೊಟ್ಟಿದ್ದಾನೆ: (1) ಯೋಗ್ಯವಲ್ಲದ ಮದುವೆಯಿಂದ ಶುದ್ಧತೆಯ ಮದುವೆ ಕಾಪಾಡುವದಕ್ಕಾಗಿ, (2) ಭ್ರಾಂತಿಯ ಆಧಾರದ ಮೇಲೆ ತನ್ನ ಗಂಡನಿಂದ ಹೆಂಡತಿಯನ್ನು ಕಳುಹಿಸಿಬಿಡುವದನ್ನು ತಪ್ಪಿಸುವದಕ್ಕಾಗಿ, ಮತ (3) ವಿಚ್ಛೇದನ ಹೊಂದಿದ ಮಹಿಳೆಗೆ ಸ್ಥಾನಮಾನ ಕೊಡುವದಕ್ಕಾಗಿ ಅವಳನ್ನು ಸೂಳೆಯೆಂದು ಅಥವಾ ಓಡಿಹೋಗುವ ವ್ಯಭಿಚಾರಿಯೆಂದು ಅವಲೋಕನ ಮಾಡಬಾರದು ಎನ್ನುವದಕ್ಕಾಗಿ. (Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke,* ed. Clinton E. Arnold [Grand Rapids, Mich.: Zondervan, 2002], 118.) [14]"ಆಕ್ಷೇಪಣೆಯ ಕಾರಣವು" ಒಂದೇ ಸಮವಾಗಿರುವ ಸುವಾರ್ತೆಯಲ್ಲಿ ಕಂಡುಬರುವದಿಲ್ಲ (ಮಾರ್ಕ 10:11; ಲೂಕ 16:18). [15]ಸಂಬಂಧಿಸಿದ ಕ್ರಿಯಾಪದ (*moichaō*), "ವ್ಯಭಿಚಾರದಲ್ಲಿ ತೊಡಗು" 9ನೇ ವಚನದಲ್ಲಿ ಕಂಡುಕೊಳ್ಳಲಾಗಿದೆ. Jack P. Lewis, "An Exegesis of Matthew 19:1–12," *Harding Graduate School of Religion Bulletin* 18 (September 1987): 2. [16]Mishnah *Ketuboth* 3.5; *Sotah* 5.1; *Yebamoth* 2.8. [17]Sirach ಎಂಬ ಅಪೊಕ್ರಿಪ ಪುಸ್ತಕದಲ್ಲಿ ಹೀಗೆ ಹೇಳಲಾಗಿದೆ, "ನೀನು ಹೇಳಿದ ಹಾಗೆ ಆಕೆ ಮಾಡದಿದ್ದಲ್ಲಿ, ನಿನ್ನಿಂದ ಆಕೆಯನ್ನು ದೂರಮಾಡು" (Sirach 25:26 [NRSV]). ಟಾಲ್ಮಂಡ್ ಹೀಗೆ ಹೇಳುತ್ತದೆ, "[ಒಬ್ಬನಿಗೆ] ಕೆಟ್ಟ ಹೆಂಡತಿ ಇದ್ದಲ್ಲಿ ಆಕೆಯನ್ನು ವಿಚ್ಛೇದನ ಮಾಡುವದು ಯೋಗ್ಯವಾದ ಕಾರ್ಯವಾಗಿದೆ" (Talmud *Yebamoth* 63b); "ನೀನು ಆಕೆಯನ್ನು ದ್ವೇಷಿ ಸುವದಾದರೆ ಆಕೆಯನ್ನು ಬಿಟ್ಟುಬಿಡು" (Talmud *Gittin* 90b). ಹಿಂದಿನ ಕಾಲದ ಒಂದು ಕಥೆಯಲ್ಲಿ ಯೆಹೂದ್ಯರು ಗಂಡಂದಿರು ತಮ್ಮ ಹೆಂಡತಿಯರಿಗೆ ವಿಚ್ಛೇದನ ಕೊಡಲು ಪ್ರೋತ್ಸಾಹಿಸುತ್ತಿದ್ದರು. ಪುರುಷನು ತನ್ನ ಹೆಂಡತಿಗೆ ವರದಕ್ಷಿಣೆಯನ್ನು ಹಿಂತಿರುಗಿಸಲು ಆಗದೆ ಇರುವ

ಪರಿಸ್ಥಿತಿಯಲ್ಲಿ ಯೆಹೂದ್ಯ ಗುರುಗಳು ಹಣವನ್ನು ಕೊಡದೆ ಅವನು ವಿಚ್ಛೇದನ ಕೊಡಲು ಇವರು ಸಹಾಯ ಮಾಡುತ್ತಿದ್ದರು. (*Genesis Rabbah* 17.3; *Leviticus Rabbah* 34.14.) [18]Mishnah *Zabim* 2.1; *Yebamoth* 8.4–6; Jerusalem Talmud *Yebamoth* 8.4–6. [19]Ibid. [20]Josephus *Antiquities* 4.8.40; *Against Apion* 2.38.

[21]*The Middle Assyrian Laws* A15, 18, 19. [22]Will Roscoe, "Priests of the Goddess: Gender Transgression in Ancient Religion," *History of Religions* 35 (1996): 195–230. [23]Xenophon *Cyropaedia* 7.5.60–65. [24]ಈ ಪದ *(saris),* "ನಪುಂಸಕ" ಎಂದು ಭಾಷಾಂತರಿಸಲಾಗಿದೆ (KJV), ಇದನ್ನು "ಅಧಿಕಾರಿ" (NASB) ಎಂದು ಭಾಷಾಂತರಿಸಲಾಗಿದೆ. [25]Origen (c. A.D. 185ñ254) ರವರು ಭಿನ್ನವಾಗಿ, ವ್ಯಾಖ್ಯಾನವನ್ನು ಅಕ್ಷಾರರ್ಥವಾಗಿ ತೆಗೆದುಕೊಂಡು ಮತ್ತು ತನ್ನನ್ನು ತಾನು ನಿರ್ವೀರ್ಯ ಮಾಡಿಕೊಂಡನು. (Eusebius *Ecclesiastical History* 6.8.) [26]ನಿಜವಾಗಿಯೂ ಯೆಹೂದ್ಯರು ಮದುವೆ ಎನ್ನುವದು ದೇವರು ಆಜ್ಞಾಪಿಸಿದ್ದಾನೆ ಎಂದು ಅವಲೋಕಿಸುತ್ತಾರೆ (ನೋಡಿರಿ ಆದಿಕಾಂಡ 1:28). (Mishnah Yebamoth 6.6.) ಬ್ರಹ್ಮಚರ್ಯವನ್ನು ಅಪ್ಪಿಕೊಳ್ಳುವವರು ಪ್ರಾಚೀನ ಎಸಿನೀಸ್ ತಂಡದವರು. (Josephus *Antiquities* 18.1.5; *Wars* 2.8.13; Pliny *Natural History* 5.15.) [27]Glenn T. Stanton, "Divorce," http://www.focusonthefamily.com/lifechallenges/relationship_challenges/divorce.aspx; accessed 7 June 2010.